॥धर्मो रक्षति रक्षितः॥

# HAVYAKA SANDESHA

ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. XIX, No. 6 September 2011 Pages 12 **Rs. 2/-**



## SHREE DURGA POOJA ON 1/10/2011
### AT PEJAWAR MUTT, SANTACRUZ (E), BETWEEN 3-6 P.M.

*PAGE DONATED BY : **M/S. METALLURGICAL SERVICES,** COURTESY : **SHRI RAMESH G. HEGDE,** MADAPPAN, KARKI, DADAR T. T. (DEC.-2009)*

**"Havyaka Sandesha"** is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆2665 2591

***Hon. Editor*** : Smt. Amita S. Bhagwat

***Hon. Joint Editor*** : G. V. Bhagwat

***Editorial Committee*** : R. P. Hegde, R. M. Shastri, Smt. Shashikala Hegde

***Publisher*** : Narayan Akadas R.
**Hon. Gen. Secretary**

***Printed at*** : M/s. Navin Printers
**Mumbai - 400 016.**
**✆ 2430 8316**

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :** Patron (PT) Rs. 5010/-, benefactor (BN) Rs. 3010/-, Sustaining Life Member (SL) Rs. 2010/-, Life Member (LM) 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted. Cheque & DD shall be drawn in favour of "Havyaka Welfare Trust".

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2009-2010**

| | | |
|---|---|---|
| ***President*** | : | N. R. Hegde, Dombivli |
| ***Vice - President*** | : | Shivkumar P. Bhagwat |
| ***Hon. Gen. Secretary*** | : | Narayan Akadas |
| ***Hon. Jt. Secretary*** | : | R. M. Shastri, Dombivli |
| ***Hon. Treasurer*** | : | A. G. Bhat |

***Elected Members :***

| | |
|---|---|
| Smt. Tanuja Hegde | R. P. Hegde |
| Smt. Shashikala Hegde | R. N.Kameshwar |
| A. K. Bhat | Smt. Uma Swamy |
| M. G. Ramakrishna | Sanjay Bhat |

Sathishkumar K.C.

***Co-opted Members :***

| | |
|---|---|
| G. V. Bhagwat | Balchandra Markande |
| Ganesh Shanbhag | Prabhakar Bhat |

Shripad Bhat

***Editorial***

# SALUTING LORD GANESHA

Draw a Swastik on the floor, place Beetle Leaves, Arecanut and you may invoke Ganesha. In whatever form He may take shape, it is utmost important to give the first offering in any Pooja to our beloved Lord ,by whatever name you may call Him Ganesha, Ganapathi, Vigneshwara, Gananayaka — Aadi Vande Gana Nayaka.

Ganesha came into life by the dirt of his Mother's body, penalized by his Father's anger and ultimately got Elephant's head. He comes from soil, embodies nature and therefore remains close to our hearts. So innocent, but also clever who won every race with his brother. He is the one who completed his world tour by taking three Pradakshina of his parents and won the race. Many stories revolve around Bala Ganesha and He evolves as the Lord of wisdom— Vidya Buddi Dehime.

On the day of Bhadrapada Shukla Chauti, devotees eagerly wait for His arrival. Mother Nature is also vivacious in Monsoon to welcome him. He is designed differently, taking shapes as per the wishes of his devotees, moulded by the sculptor. Therefore, every statue of Lord Ganesha is unique, fascinating His devotees and drawing a large crowd. He may not be handsome in the literal sense but Ganesha's charm lies in his being different from all other Gods. His small eyes, trunk, big stomach and large ears have great attraction to children. Give them clay and they will mould it into elephant God. The festival also freshens up our childhood memories when we would decorate the house with great enthusiasm in His welcome. The magic of Ganesha Chaturthi is that, it infuses in us a child like enthusiasm. The whole atmosphere is filled with serenity in His abode and He, who is made from the mud and clay, goes back to his original place after His stay, i.e. – water and mud. Ganapati Bappa Moraya.

An elephant's trunk has the strength to uproot a tree as well as fineness to pick up a needle. Ganesha's trunk symbolizes the fact that a wise person has both immense strength and fine discretion. His large ears suggest that a good person hears all. Lotus in his hand is the symbol of enlightenment. He rides on a rat, which is considered to be one of the greediest animals, nibbling at whatever is available. It is the symbol of our senses. By riding on the rat, He conveys that we should keep our senses under control.

His influence transcends beyond the boundary of caste and religion. Thanks to Balaganagadhar Tilak who popularized the festival and brought the concept of Sarvajanika Ganapati to build up the unity of the country. The city of Mumbai is all set to welcome Him. People of all caste, creed and religion become one while worshiping Him to the tune of Tuja Namo, Tuja Namo, Tuja Namo.

We hope that the Vighnanashaka shall wash away all our troubles and the turmoil under which our country is going through shall come to an end. We wish that crusade against corruption shall succeed. Let justice, equality and peace prevail amongst every one. Sarve Janah Sukhino Bhavantau.

Amita S Bhagwat

e-mail : amitabhagwat@gmail.com

*PAGE DONATED BY :* ***ADVOCATE M.S. PANDIT, PUNE***

# PRESIDENT'S MESSAGE

Dear friends,

By the time our mouth piece Havyaka Sandesha reaches you our AGM will be over and we would have already begun with a new chapter. We are quite happy when we look back at the by gone year. The activities of the Trust should not be a routine affair, and it is desirable to add new activities from time to time so that the Trust will be always vibrant.

We are happy that our great tradional Art Yakshagana took the centre stage in our cultural programs last year. Yakshagana from Kannada Kala Kendra, played in Karki Venkataraman Shastri Suri award function in which our committee member Satish Kumar played an important role was the key feature of cultural program of the day. Again, Yakshagana Dakshayajna played by Sahyadri Mahila Yakshagana Samuha was an important part of the charity Show which captivated the audience. We have one more reason to be happy that more and more youth are participating not only in our cultural activities but in picnic also and we were happy to see the youth taking the centre stage. Needless to say that participation by the youth also energizes the organization. It was also our youth experts in their profession who came to our help while solving the problems regarding the Panvel land. We appreciate them for their expertise and support. We should encourage the youth to take active participation in the affairs of the trust realizing that the future of the Trust depends on our youth.

We were in the look out since last few years for a person from our community who could devote time for writing the accounts of the Trust. As we could not get such a person we had no alternative but to appoint a non Havyaka as an accountant to ensure that the accounts are maintained systematically, so that at the end of the year we have no problem for presenting the final accounts.

Friends, it is the time to move ahead and realize our dream project Havyakara Bhavana and also construct Old Age Home. There are some technical difficulties but in our community we have experts who are always willing to give timely advice. Now, it is the time to act, build up the team and work towards the goal. It is our Goal that at the end of the year we have our Havyakara Bhavana. Best Wishes

**N R HEGDE**
***President***

## FOR THE ATTENTION OF MERITORIOUS STUDENTS OF OUR MEMBERS

The students who have passed the following examinations held in March – May 2011 with merit as shown below are requested to respond for consideration of awarding scholarship and certificate of excellence:

| | | |
|---|---|---|
| **S.S.C./H.S.C.** | : | **85% and above** |
| **B.Sc.** | : | **75% and above** |
| **B.Com./B.A./Medicine/ Engineering and graduation in any other stream** | : | **70% and above** |
| **Post Graduation** | : | **65% and above** |

They should submit Xerox copies of mark sheets along with a covering letter stating their name, name of the parents with their membership no., postal address and contact telephone number on or before 20th September, 2011 to our Office. The meritorious students will be felicitated on Durga Pooja day. Please note that only those who are present on the occasion will be awarded scholarship. Students who are having learning disability/ handicapped/retarded will be given special consideration.

**NARAYAN AKADAS**
**Hon. General Secretary**

*PAGE DONATED BY : **SMT. SHANTA V. HEGDE,** CARMICHAEL ROAD (DEC.-2011)*

*ಕೃತಿ ಪರಿಚಯ*

# ಶ್ರೀ ಸನತ್‌ಕುಮಾರ್ ಜೈನ್ ಅವರ ವೈಚಾರಿಕ ಲೇಖನಗಳ ಸಂಗ್ರಹ ''ಸಂಚಯ''

**ಡಾ। ಕರುಣಾಕರ ಎನ್. ಶೆಟ್ಟಿ, ಪಣಿಯೂರು**

ಶ್ರೀ ಸನತ್‌ಕುಮಾರ್ ಜೈನ್ ಅವರ ಚೊಚ್ಚಲ ಕೃತಿ ವೈಚಾರಿಕ ಲೇಖನಗಳ ಸಂಕಲನ 'ಸಂಚಯ' ಇತ್ತೀಚೆಗೆ ಲೋಕಾರ್ಪಣೆಗೊಂಡಿತು.

ಕೃತಿಯ ಮುಖಪುಟವನ್ನು ಅಂತರ್‌ರಾಷ್ಟ್ರೀಯ ಖ್ಯಾತಿಯ ಕಲಾವಿದ ದೇವದಾಸ್ ಶೆಟ್ಟಿಯವರ ಕಲಾಕೃತಿ ಅಲಂಕರಿಸಿ ಕೃತಿಯ ಮೆರುಗನ್ನು ಹೆಚ್ಚಿಸಿದರೆ, ಡಾ। ಸುನೀತಾ ಶೆಟ್ಟಿಯವರ ಮುನ್ನುಡಿ, ಪ್ರೊ। ಸೀತಾರಾಮ್ ಶೆಟ್ಟಿಯವರ ಬೆನ್ನುಡಿ ಕೃತಿಯ ಮೌಲ್ಯವನ್ನು ದ್ವಿಗುಣಗೊಳಿಸಿದೆ.

ಇಲ್ಲಿ ಕೃತಿಕಾರರು ಸ್ವತಃ ಅಧ್ಯಾಪಕರಾಗಿರುವ ಕಾರಣ ಅಧ್ಯಾಪನ ಮಾಡಲು ಅಭ್ಯಾಸ ಅತ್ಯಗತ್ಯ. ಅಧ್ಯಾಪಕರ ಕರ್ತವ್ಯ ವಿದ್ಯಾರ್ಥಿಗಳನ್ನು ತಿದ್ದಿ ತೀಡುವುದು. ಅದಕ್ಕೆ ಪೂರ್ವ ತಯಾರಿ ಜ್ಞಾನದ ತಳಹದಿ ಬೇಕೇ ಬೇಕು. ಇಲ್ಲವಾದಲ್ಲಿ ಆತ ತನ್ನ ಕರ್ತವ್ಯ ಸಮರ್ಥವಾಗಿ ನಿರ್ವಹಿಸಲಾರ. ಈ ಕೃತಿಯುದ್ದಕ್ಕೂ ಲೇಖಕರ ಪರಿಶ್ರಮ ಎದ್ದು ಕಾಣುತ್ತದೆ. ಬಹುಶಃ ಈ ಕಾರಣದಿಂದಾಗಿಯೇ ಹೆಚ್ಚಿನ ಅಧ್ಯಾಪಕರು ಲೇಖಕರಾಗಿ ಬೆಳೆದಿರುವುದು, ಅವರಿಗೆ ವಿವಿಧ ವಿಷಯಗಳಲ್ಲಿ ಅಪಾರ ಜ್ಞಾನವಿರುತ್ತದೆ.

ಈ ಕೃತಿಯಲ್ಲಿ ಬರುವ ಹೆಚ್ಚುತ್ತಿರುವ ಮಕ್ಕಳ ಆತ್ಮಹತ್ಯೆ, ಮಾತೃಭಾಷೆಯಲ್ಲಿ ಶಿಕ್ಷಣ, ವಿಜ್ಞಾನ ನಮಗೊಂದು ವರದಾನ, ಮಕ್ಕಳ ಚಿಂತನೆಗೆ ಅವಕಾಶವಿದೆಯೇ? ಪ್ರಾಥಮಿಕ ಶಿಕ್ಷಣ, ಮುಂಬಯಿ ಶಿಕ್ಷಣ ಇವೆಲ್ಲ ಲೇಖನಗಳು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದವುಗಳೇ. ಶಿಕ್ಷಣ ಕ್ಷೇತ್ರದ ಸಮಸ್ಯೆಗಳನ್ನು ಶಿಕ್ಷಕರಿಗಿಂತ ಚೆನ್ನಾಗಿ ಇತರರು ತಿಳಿಯಲಾರರು ಅದರ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಲಾರರು. ಈ ಲೇಖನಗಳತ್ತ ನೀವು ಆಳವಾಗಿ ಗಮನ ಹರಿಸಿದರೆ ಶಿಕ್ಷಣ ಕ್ಷೇತ್ರದ ಬಹಳಷ್ಟು ಸಮಸ್ಯೆಗಳಿಗೆ ಉತ್ತರ ಹುಡುಕಬಹುದಾಗಿದೆ. ಸಾಹಿತ್ಯ ಎನ್ನುವುದು ಸಮಾಜಕ್ಕೆ ಕೈಗನ್ನಡಿ ಎನ್ನುವುದಕ್ಕಿಂತಲೂ ಕೈದೀಪ ಎನ್ನುವುದೇ ಸರಿ. ಈ ದೀಪ ಕೈಯಿಂದ ಕೈಗೆ ವರ್ಗಾವಣೆ ಆಗಬೇಕು. ನಮಗೊಬ್ಬರಿಗೆ ಮಾತ್ರವಲ್ಲ, ಸುತ್ತಲಿನವರಿಗೂ ದೀಪದ ಬೆಳಕು ದೊರಕುವಂತಾಗಬೇಕು. ಈ ಬೆಳಕನ್ನು ಸಾಹಿತ್ಯ ಮಾತ್ರ ಮುಟ್ಟಿಸಬಹುದಾಗಿದೆ. ಇಂತಹ ಕೃತಿಗಳ ಅದಕ್ಕೆ ನೆರವು ನೀಡುವುದು ಎನ್ನುವ ಡಾ। ಸುನೀತಾ ಶೆಟ್ಟಿಯವರ ಮಾತುಗಳು ಇಲ್ಲಿ ಪ್ರಸ್ತುತವೆನಿಸುತ್ತವೆ.

'ಶತಮಾನದ ವ್ಯಕ್ತಿ ಶಿವರಾಮ ಕಾರಂತರು ಲೇಖನ' ಕಾರಂತರ ಸಿದ್ಧಿ ಸಾಧನೆಗಳತ್ತ ಕ್ಷಕಿರಣ ಬೀರಿದರೆ 'ಭಾರತೀಯ ಮಹಿಳೆ ಇಂದು ಸ್ವತಂತ್ರಳೇ' ಲೇಖನ ಭಾರತೀಯ ನಾರಿ ನಡೆದು ಬಂದ ದಾರಿಯತ್ತ ಬೆಳಕು ತೋರುತ್ತದೆ.

'ಸ್ತ್ರೀ ಶಕ್ತಿಯನ್ನು ಭಾರತದ ವಿವಿಧೊದ್ದೇಶ ವಿಕಾಸದತ್ತ ಸರಿಯಾಗಿ ಬಳಸಿಕೊಂಡಲ್ಲಿ ಭಾರತವು ಸರ್ವಶಕ್ತ ರಾಷ್ಟ್ರವಾಗಲು, ಗಾಂಧೀಜಿಯ ಕನಸು ನನಸಾಗಲು ಸಾಧ್ಯ. ಎಲ್ಲಾ ಮಹಿಳೆಯರೂ ವಿದ್ಯಾವಂತರಾಗಿ ರಾಷ್ಟ್ರ ನಿರ್ಮಾಣ ಪ್ರಕ್ರಿಯೆಯಲ್ಲಿ ಗೌರವಾನ್ವಿತ ಸ್ಥಾನ ಪಡೆಯಬೇಕು. ಭಾರತೀಯ ಮಹಿಳೆ ಇಂದು ಸ್ವತಂತ್ರಳೇ? ಲೇಖನದಲ್ಲಿ ಬರುವ ಈ ಸಾಲುಗಳು ಲೇಖಕರ ಆಳವಾದ ಅಭ್ಯಾಸಕ್ಕೆ, ಚಿಂತನೆಗೆ ಸಾಕ್ಷಿ ನುಡಿಯುತ್ತದೆ.

'ಸಮ್ಮೇದ ಶಿಖರ್‌ಜೀ ಯಾತ್ರೆ' ಪ್ರವಾಸ ಕಥನ. ಈ ಲೇಖನ ಆಧ್ಯಾತ್ಮಿಕ ತಳಹದಿಯ ಮೇಲೆ ನಿಂತಿದೆ. ''ವರ್ಧಮಾನ ಮಹಾವೀರ ಸ್ವಾಮಿ ಮುಕ್ತಿಧಾಮವಾದ ಪಾವಾಪುರಿಯತ್ತ ಹೊರಟೆವು. ಹೃದಯಂಗಮ ನೋಟದ ಎಲ್ಲಾ ದೃಶ್ಯಾವಳಿಗಳ ಚಿಂತನ ಮಂಥನ ನಡೆಯುತ್ತಿದ್ದಂತೆ ಪರಮ ಪಾವನ ಪಾವಾಪುರದ ಧರ್ಮಶಾಲೆಯ ಮುಂದೆ ಬಸ್ಸು ನಿಂತಿತ್ತು''. ಲೇಖನದ ಈ ಸುಂದರ ದೃಶ್ಯದ ವರ್ಣನೆ ಓದಿದಾಗ ಈ ಪವಿತ್ರತಾಣಕ್ಕೆ ಪ್ರವಾಸಗೈಯಬೇಕೆಂಬ ತುಡಿತವುಂಟಾಗುತ್ತದೆ.

ಅದೇ ರೀತಿ 'ವೃದ್ಧಾಶ್ರಮ' ಇಂದು ಮುಂದುವರಿದವರೆಂದು ಕರೆಸಿಕೊಳ್ಳುವವರ ಜೀವನಕ್ಕೆ ಅಂಟಿಕೊಂಡಿರುವ ಶಾಪದ ಬಗ್ಗೆ ಚರ್ಚೆಯನ್ನು ಮಾಡಿದೆ.

ನಮ್ಮ ಜನನಿ-ಜನಕರು ನಮಗೆ ಭಾರವಾಗಕೂಡದು. ಅವರ ಋಣಭಾರ ಜನ್ಮ ಜನ್ಮಾಂತರದಲ್ಲಿ ಪೂರೈಸಲಾಗದು. ಆದ್ದರಿಂದ ವೃದ್ಧಾಶ್ರಮ ಸನಾತನ ಸಂಸ್ಕೃತಿಯ ನಮಗೆ ಶೋಭೆಯಲ್ಲ. ವೃದ್ಧಾಶ್ರಮ ಸಮಾಜಕ್ಕೆ ಭೂಷಣವಾಗಲು ನಮ್ಮ ಮನೆ, ನಮ್ಮ ಮನ ಕಾರಣವಾಗಕೂಡದು. ಹಳೆಬೇರು, ಹೊಸಚಿಗುರು ಕೂಡಿರಲು ಮರ ಸೊಬಗು ಎಂಬಂತೆ ನಮ್ಮ ಮನೆಯ ಹಿರಿಯರಿಗೆ ನಮ್ಮ ಮನೆಯಲ್ಲೇ ಪೂಜಾ ಸ್ಥಾನ ಸಿಗಲಿ. ಲೇಖಕರ ಅಂತರಾಳದ ಮಾತು ಎಲ್ಲರ ಅಂತರಾಳದ ಮಾತಾದರೆ ಬಹುಶಃ ಇಂದು ವೃದ್ಧಾಶ್ರಮದಲ್ಲಿ, ಅನಾಥಾಶ್ರಮದಲ್ಲಿ ವೃದ್ಧರು ಒಂದೊಂದು ಹನಿ ಪ್ರೀತಿಗಾಗಿ ಪರಿತಪಿಸುವಂತಾಗುತ್ತಿರಲಿಲ್ಲ.

ಅಧ್ಯಾಪಕ ವೃತ್ತಿಯಲ್ಲಿರುವ ಸನತ್‌ಕುಮಾರ್‌ರ ಭಾಷೆ ಅಲಂಕಾರಿಕವಾದುದು. ಆದರೆ ಇದು ಎಲ್ಲ ಲೇಖನಕ್ಕೆ ಹೊಂದಿಕೊಳ್ಳಲಾರದು. ಗಂಭೀರ ಚಿಂತನೆಯ ಲೇಖನ ಬರೆಯುವಾಗ ಅಥವಾ ಓದುವಾಗ ಅತಿ ಅಲಂಕಾರಿಕ ಶಬ್ಧಗಳು ಲೇಖನದ ಓಘಕ್ಕೆ ತಡೆಯೊಡ್ಡಬಹುದಾಗಿದೆ. ಲೇಖಕರು ಹಾಗಾಗಬಾರದಂತೆ ನೋಡಿಕೊಳ್ಳಬೇಕಾಗಿದೆ.

ಇಂತಹ ಉಪಯುಕ್ತ ಕೃತಿಯನ್ನು ರಚಿಸಿದ ಸನತ್‌ಕುಮಾರ್ ಜೈನ್ ಅವರು ಅದೇ ರೀತಿ ಕೃತಿಯನ್ನೂ ಪ್ರಕಟಿಸಲು ಮುಂದೆ ಬಂದ ಜಗಜ್ಯೋತಿ ಪ್ರಕಾಶನದ ಸರ್ವ ಸದಸ್ಯರೂ ಇಲ್ಲಿ ಅಭಿನಂದನೆಗೆ ಪಾತ್ರರಾಗುತ್ತಾರೆ. ●

## Donation



Received donation of Rs. 2000/- from Smt. Indira and Shri Laxman Shanbhag, Kadtoka (Our LM) on the happy occasion of marriage of their son **Chi. Vagishkumar** with Chi. Sow. **Prabha,** D/o. Smt. & Shri Vigneshwar Bhat, Shrirangapattana on 3.5.2011 at Lingadakone Temple, Sirsi.

***We wish a happy and prosperous wedded life to newly married couple***

*PAGE DONATED BY : **SHRI BALCHANDRA MARKANDE, DOMBIVLI***

# ಭಾಗವತ ಮಹಾತ್ಮ್ಯೆ

*ಸಂಗ್ರಹಿಸಿ ಸಂಕ್ಷಿಪ್ತವಾಗಿ ಬರೆದವರು :* **ಡಾ| ವಸಂತ ಭಾಗವತ ವೀಣೆ**

***( ಈ ಭಾಗವತ ಕಥೆಯು ಮಕ್ಕಳಿಗಾಗಿ ಇದೆ. ಅವರಿಗೆ ಓದಲಿಕ್ಕೆ ಬರದಿದ್ದರೆ ಹಿರಿಯರು ಓದಿ ಹೇಳಬೇಕಾಗಿ ವಿನಂತಿ. )***

## ಯಜ್ಞ, ಪತ್ನಿಯರಿಗೆ ಕೃಪಾ

ಒಮ್ಮೆ ಶ್ರೀಕೃಷ್ಣ, ಬಲರಾಮರು ಯಮುನೆಯ ತೀರದಲ್ಲಿ ಆಟವಾಡುತ್ತ ಆಟವಾಡುತ್ತ ತುಂಬಾ ಹಸಿವೆ ಆಯಿತು. ತಾವು ತಂದ ಗಂಟನ್ನು ಈ ಮೊದಲೇ ತಿಂದುಬಿಟ್ಟಿದ್ದರಿಂದ ಗೋಪಾಲರು ಶ್ರೀಕೃಷ್ಣ ಬಲರಾಮರಿಗೆ ತಮ್ಮ ಹಸಿವೆಯನ್ನು ಶಾಂತಿಮಾಡಲು ವಿನಂತಿ ಮಾಡಿಕೊಂಡರು. ಆಗ ಶ್ರೀಕೃಷ್ಣನು ತನ್ನ ಮಿತ್ರರಿಗೆ "ಇಲ್ಲಿಂದ ತುಸು ದೂರದಲ್ಲಿ ವೇದವಾದೀ ಬ್ರಾಹ್ಮಣರು ಸ್ವರ್ಗಪ್ರಾಪ್ತಿಗಾಗಿ ಅಂಗೀರಸ ಎಂಬ ಯಜ್ಞವನ್ನು ಮಾಡುತ್ತಿರುವರು. ನೀವು ಆ ಯಜ್ಞ ಶಾಲೆಗೆ ಹೋಗಿ ನನ್ನ ಯಾ ಬಲರಾಮನ ಹೆಸರು ಹೇಳಿ ತುಸು ಅನ್ನವನ್ನು ಇಸಿದುಕೊಂಡು ಬನ್ನಿರಿ" ಎಂದನು.

ಆಗ ಗೋಪಾಲರು ಯಜ್ಞಶಾಲೆಗೆ ಹೋಗಿ ಬ್ರಾಹ್ಮಣರನ್ನು ಕುರಿತು "ಶ್ರೀಕೃಷ್ಣ ಬಲರಾಮರು ಗೋವುಗಳನ್ನು ಮೇಯಿಸುತ್ತ ದೂರದಿಂದ ಬಂದಿರುವರು. ಅವರಿಗೆ ಹಸಿವೆಯಾಗಿದೆ. ಅವರಿಗಾಗಿ ತುಸು ಅನ್ನವನ್ನು ಕೊಡಿರಿ. ನಿಮಗೆ ಕಲ್ಯಾಣವಾಗಲಿ" ಎಂದರು. ಆದರೆ ಆ ಬ್ರಾಹ್ಮಣರು ಕೇಳಿದರೂ ಕೇಳದಂತೆ ಉದಾಸೀನ ದೃಷ್ಟಿಯಿಂದ ತಾವೇ ಸ್ವತಃ ಪರಿಚಿತರೆಂಬ ಅಹಂಕಾರದಿಂದ ಯಜ್ಞವನ್ನು ಸಾಗಿಸುತ್ತ ಕುಳಿತರು. ಹಸಿವೆಯಿಂದ ವ್ಯಾಕುಲರಾದ ಗೋಪಾಲರು ಬಹಳ ಹೊತ್ತಿನವರೆಗೆ ದಾರಿ ಕಾಯ್ದು ಬೇಸತ್ತರು. ಕೊನೆಗೆ ಸಣ್ಣ ಮೋರೆ ಮಾಡಿಕೊಂಡು ಕೃಷ್ಣನಲ್ಲಿ ಹಿಂದಿರುಗಿ ಬಂದು "ಕೃಷ್ಣಾ ಬಿಸಿಲಲ್ಲಿ ಹೋಗಿ ಬಂದದ್ದು. ಅಷ್ಟೇ ಆಯಿತು. ಹಸಿವೆ ಮಾತ್ರ ಹೆಚ್ಚಿತು. ಏನು ಮಾಡಬೇಕು ಹೇಳು" ಎಂದು ನುಡಿದರು.

ಆಗ ಶ್ರೀಕೃಷ್ಣನು ''ಸಂಸಾರದಲ್ಲಿ ಅಸಫಲತೆಯು ಮೇಲಿಂದ ಮೇಲೆ ಆಗುತ್ತಾ ಇರುತ್ತದೆ. ಅದಕ್ಕಾಗಿ ನಿರಾಶರಾಗಬಾರದು ಮತ್ತೆ ಮತ್ತೆ ಪ್ರಯತ್ನ ಮಾಡಬೇಕು. ಈ ಬಾರಿ ನೀವು ಅವರ ಪತ್ನಿಯರ ಕಡೆಗೆ ಹೋಗಿ ನನ್ನ ವಿಷಯ ಹೇಳಿರಿ. ನೀವು ಎಷ್ಟು ಭೋಜನ ಬೇಡುವಿರೋ ಅಷ್ಟು ಅವರು ಕೊಡುವರು'' ಎಂದನು. ಆಗ ಬಾಲಗೋಪಾಲರು ಬ್ರಾಹ್ಮಣರ ಪತ್ನಿಯರ ಶಾಲೆಗೆ ಹೋದರು. ಅವರೆಲ್ಲ ಅಡುಗೆ ಮಾಡುವ ಗಡಿಬಿಡಿಯಲ್ಲಿ ಇದ್ದರು. ಶ್ರೀಕೃಷ್ಣನು ಹಸಿವೆಯಾಗಿದ್ದು ಅವನ ಬಗ್ಗೆ ಭೋಜನ ಕೇಳಲು ಬಂದ ವಿಷಯ ಕೇಳಿ ಅವರೆಲ್ಲರೂ ತಟ್ಟನೆ ಎದ್ದು ಸ್ವಾದಿಷ್ಟ ಪದಾರ್ಥಗಳನ್ನು ಪಾತ್ರೆಯಲ್ಲಿ ತುಂಬಿಕೊಂಡು ತಮ್ಮ ಬಂಧು ಪುತ್ರ ಯಾರನ್ನೂ ಕೇಳದೆ ಭಗವಾನ್ ಶ್ರೀಕೃಷ್ಣನ ಕಡೆಗೆ ಹೊರಟೇ ಬಿಟ್ಟರು! ಬ್ರಾಹ್ಮಣರೆಲ್ಲರೂ ಅವರು ಹೋಗುವವರನ್ನು ನೋಡುತ್ತ ನಿಂತು ಬಿಟ್ಟರು! ಕೆಲವರು ಅವರನ್ನು ತಡೆದರೂ ಆ ಸ್ತ್ರೀಯರು ಲೆಕ್ಕಿಸಲೇ ಇಲ್ಲ. ಬಾಲಗೋಪಾಲರ ಜೊತೆಗೆ ನಡೆದೇ ಬಿಟ್ಟರು. ಆ ಬ್ರಾಹ್ಮಣ ಪತ್ನಿಯರು ಶ್ರೀಕೃಷ್ಣನ ಗುಣ, ಲೀಲಾ, ಸೌಂದರ್ಯ ಹಾಗೂ ಮಾಧುರ್ಯ ಇತ್ಯಾದಿ ವರ್ಣನೆಗಳನ್ನು ಕೇಳಿ, ಕೇಳಿ ತಮ್ಮ ಹೃದಯವನ್ನು ಅವನ ಚರಣಗಳಿಗೆ ಸಮರ್ಪಿಸಿ ಬಿಟ್ಟಿದ್ದರು. ಅಶೋಕವನದಲ್ಲಿ ಕೆಲವೊಂದು ಬಾಲಗೋಪಾಲರೊಂದಿಗೆ ಅಡ್ಡಾಡುತ್ತಿರುವ ಸುಗುಣ, ಸಾಕಾರ, ಪರಬ್ರಹ್ಮ, ಅನಂತಕೋಟಿ ಬ್ರಹ್ಮಾಂಡ ನಾಯಕನಾದ ಪರಮಾತ್ಮನನ್ನು ಕಂಡರು. ತಾವು ಕಣ್ಣುಗಳಿಂದ ಆನಂದಾಶ್ರುಗಳನ್ನು ಹರಿಸುತ್ತ ತಾವು ತಂದ ಅನ್ನದ ಪಾತ್ರೆಗಳನ್ನೆಲ್ಲ ಕೃಷ್ಣನ ಮುಂದೆ ಇಟ್ಟರು. ಆತನ ಕೂಡ ಮಾತನಾಡಬೇಕೆಂಬ ಇಚ್ಛೆ ಇದ್ದರೂ ಕಂಠದಿಂದ ಶಬ್ದಗಳೇ ಬರಲೊಲ್ಲವು. ಶ್ರೀಕೃಷ್ಣನು ಗೋಪಾಲರಿಗೆ ಬೇಕಾದುದನ್ನು ತೆಗೆದುಕೊಂಡು ಹೊಟ್ಟೆ ತುಂಬ ತಿನ್ನಲು ಹೇಳಿದನು. ಗೋಪಾಲರೆಲ್ಲರೂ ನೀ ಮುಂದೆ ನಾ ಮುಂದೆ ಎಂದು ಹೇಳುತ್ತ ಬೇಕಾದ ಪದಾರ್ಥಗಳನ್ನು ತೆಗೆದುಕೊಂಡು ಹೊಟ್ಟೆ ತುಂಬ ತಿಂದರು. ಶ್ರೀಕೃಷ್ಣ ಬಲರಾಮರೂ ಕೂಡ ಪ್ರೀತಿಯಿಂದ ಕೆಲವು ಪದಾರ್ಥಗಳನ್ನು ತಿಂದು ತೇಗಿದರು. ಆಗ ಸರ್ವದೇವತೆಗಳು ತೃಪ್ತರಾದರು. ಲಕ್ಷ್ಮೀಯು ಆ ಸ್ತ್ರೀಯರನ್ನು ಕಂಡು ಏನಿದು ಇವರ ಭಾಗ್ಯ ಎಂದಳು!

ಶ್ರೀಕೃಷ್ಣನು ಆ ಬ್ರಾಹ್ಮಣ ಪತ್ನಿಯರಿಗೆ "ನೀವು ತಂದ ಅನ್ನ ನಮಗೆಲ್ಲ ದೊರಕಿತು. ಬಹಳ ಉತ್ತಮ ಅಡುಗೆ ಮಾಡಿದ್ದೀರಿ. ಜಾಣ ಮನುಷ್ಯನು ನನ್ನ ಮೇಲೆ ಹೀಗೆಯೇ ನಿಷ್ಕಾಮ ಭಕ್ತಿಯನ್ನು ಮಾಡುತ್ತಾನೆ. ನೀವು ಇನ್ನು ಯಜ್ಞಶಾಲೆಯ ಕಡೆಗೆ ತಿರುಗಿ ಹೋಗಿರಿ. ನಿಮ್ಮ ಪತಿ ನಿಮ್ಮ ಸಹಾಯದಿಂದಲೇ ಯಜ್ಞವನ್ನು ಪೂರ್ತಿಗೊಳಿಸುವರು. ಅವರು ನಿಮ್ಮ ದಾರಿ ಕಾಯುತ್ತ ಇರುವರು" ಎಂದನು.

ಶ್ರೀಕೃಷ್ಣನ ಮಾತನ್ನು ಕೇಳಿ ಬ್ರಾಹ್ಮಣ ಪತ್ನಿಯರು ಅವನನ್ನು ಅಗಲಲಾರದೆ ಕಣ್ಣಲ್ಲಿ ನೀರು ತಂದು ದುಃಖಿತ ಸ್ವರದಿಂದ ''ಶ್ರೀ ಹರಿ, ನಾವು ಸರ್ವಸ್ವವನ್ನು ತ್ಯಾಗ ಮಾಡಿ, ಪತಿ, ಪುತ್ರರನ್ನೆಲ್ಲ ಬಿಟ್ಟು ನಿನ್ನ ಚರಣಗಳಲ್ಲಿ ಶರಣು ಬಂದಿರುವೆವು. ನಮ್ಮ ಮೇಲೆ ಕೃಪೆ ಮಾಡು. ನಾವು ನಮ್ಮ ಪತಿ, ಪುತ್ರರ ಒಪ್ಪಿಗೆ ಪಡೆದು ಬಂದಿರುವದಿಲ್ಲದ ಕಾರಣ ನಮ್ಮನ್ನು ಅವರು ಮನೆಯೊಳಗೆ ಕರೆದುಕೊಳ್ಳುವುದಿಲ್ಲ. ಇನ್ನು ನಮಗೆ ಮುಕ್ತಿಕೊಡು'' ಎಂದು ಕಾಲಿಗೆ ಬಿದ್ದರು. ಆಗ ಭಗವಾನ್ ಶ್ರೀಕೃಷ್ಣನು ''ನೀವು ಯಾವ ಚಿಂತೆಯನ್ನೂ ಮಾಡಬೇಡಿರಿ. ನಾನು ಸರ್ವರ ಅಂತರ್ಯಾಮಿ ಹಾಗೂ ಬುದ್ಧಿದಾತಾ ಇದ್ದ ಕಾರಣ, ನಿಮ್ಮ ಪತಿ, ಬಂಧು ಹಾಗೂ ಪುತ್ರರು ನಿಮಗೆ ಒಂದು ಶಬ್ದವನ್ನೂ ಹೇಳುವುದಿಲ್ಲ. ಸ್ತ್ರೀಯರ ಮುಖ್ಯ ಧರ್ಮ ಪತಿ ಸೇವೆ ಮಾಡುವುದು. ಗೃಹಕೃತ್ಯದಲ್ಲಿ ದಕ್ಷರಾಗಿದ್ದು, ಸಂಸಾರವು ಸುಗಮವಾಗಿ ಮಾಡುವುದು ನನ್ನ ಸೇವೆಯೆಂದೇ ತಿಳಿಯಿರಿ. ಆದ್ದರಿಂದ ನೀವು ಮನೆಯಲ್ಲಿಯೇ ಇದ್ದು ನನ್ನ ಚಿಂತನೆ ಮಾಡುತ್ತ ಮುಕ್ತಿಯನ್ನು ಹೊಂದುವಿರಿ'' ಎಂದನು.

ಭಗವಂತನ ಈ ಮಾತನ್ನು ಕೇಳಿ ಬ್ರಾಹ್ಮಣ ಪತ್ನಿಯರಿಗೆ ಸಮಾಧಾನ ವಾಯಿತು. ಅವರೆಲ್ಲರೂ ಶ್ರೀಕೃಷ್ಣನ ಚರಣಧೂಳನ್ನು ತಮ್ಮ ತಲೆಯ ಮೇಲೆ ಇಟ್ಟುಕೊಂಡು, ತಮ್ಮ ತಮ್ಮ ಪಾತ್ರೆಗಳನ್ನು ತೆಗೆದುಕೊಂಡು ಭಗವಂತ ಮೂರ್ತಿಯನ್ನು ನೋಡುತ್ತ ತೀರ ಕಷ್ಟದಿಂದ ಯಜ್ಞಮಂಟಪಕ್ಕೆ ಹಿಂತಿರುಗಿದರು. ಅಲ್ಲಿ ಅವರಿಗೆ ಯಾರೂ ಏನೂ ಅನ್ನಲಿಲ್ಲ. ಇತ್ತ ಸರ್ವ ಬ್ರಾಹ್ಮಣರಿಗೆ ಶ್ರೀಕೃಷ್ಣನು ಸ್ವತಃ ಭಗವಂತನಿರುವುದೆಂದೂ ಬಲರಾಮನು ಶೇಷನ ಅವತಾರವೆಂದು ಹೊಳೆಯಿತು. ''ತಾವು ಉಚ್ಚ ಕುಲದಲ್ಲಿ ಜನ್ಮತಾಳಿ, ಗಾಯತ್ರಿ ಗ್ರಹಣ ಮಾಡಿ, ದ್ವಿಜರಾಗಿ, ವೇದಾಧ್ಯಯನ ಮಾಡಿ ಅನೇಕ ಯಜ್ಞಗಳನ್ನು ಮಾಡಿದರೂ, ಅಹಂಕಾರದ ಮೂಲಕ ಪರಮಾರ್ಥ ವಿಷಯದಲ್ಲಿ ಮೋಸ ಹೊಂದಿದೆವು. ಆದರೆ ತಮ್ಮ ಪತ್ನಿಯರು ಇವೇನೂ ಮಾಡದೆ ಸರ್ವಸ್ವವನ್ನೂ ತ್ಯಾಗ ಮಾಡಿ ಭಗವಂತನ ಮೇಲೆ ಪೂರ್ಣ ಶ್ರದ್ಧೆಯನ್ನಿಟ್ಟು ಅವನನ್ನು ಕಂಡರು. ತಮ್ಮ ಉದ್ಧಾರಕ್ಕಾಗಿ ಬಾಲಗೋಪಾಲರನ್ನು ನಮ್ಮಲ್ಲಿಗೆ ಕಳಿಸಿದರೂ ನಮ್ಮ ಕರ್ಮವು ಅಡ್ಡ ಬಂತು. ನಮ್ಮನ್ನು ಮನ್ನಿಸು'' ಎಂದು ಭಗವಂತನಿಗೆ ಪ್ರಾರ್ಥನೆ ಮಾಡಿಕೊಂಡರು. ಆದರೆ ಕಂಸನ ಹೆದರಿಕೆಯಿಂದ ಮುಂದೆ ಯಾರೂ ಅಲ್ಲಿಂದ ಸ್ಥಳ ಬಿಟ್ಟು ಕದಲಲಿಲ್ಲ. ಶ್ರೀಕೃಷ್ಣನು ಪರಮೇಶ್ವರನಿದ್ದು ತಮ್ಮ ರಕ್ಷಣೆ ಮಾಡಲು ಸಮರ್ಥನಿರುವನು ಎಂಬ ವಿಶ್ವಾಸ ಅದರಲ್ಲಿ ಇರಲಿಲ್ಲ. ಆದರೆ ಭಗವಂತನ ಮೇಲೆ ವಿಶ್ವಾಸ ಹಾಗೂ ಭಕ್ತಿಯನ್ನು ಇಟ್ಟ ಬ್ರಾಹ್ಮಣ ಸ್ತ್ರೀಯರಿಗೆ ಮಾತ್ರ ಮುಕ್ತಿ ದೊರೆಯಿತು.

*(ಮುಂದುವರಿಯುವುದು)*

*Page Donated by : **Shri Suhas Gunishastri**, Prabhadevi In the memory ofhis parents **Late Smt. Rajeshwari & Late Shri P. V. Gunishastri** , Past President, H.W.T. (Dec.-2011)*

# ಭಾಸ ಬೋಧ

– ಪ್ರೊ। ವಿಷ್ಣು ಜೋಶಿ, ಕುಮಟಾ

## ಉಗ್ರರಿಗೆ ಶಿಕ್ಷೆ ಬೇಕು

**ಕೃತಾಪರಾಧಸ್ಯ ಹಿ ಸತ್ಕೃತಿರ್ವಧಃ**

***( ಪ್ರತಿಜ್ಞಾ ಯೌಗಂಧರಾಯಣಮ್ )***

ಅಪರಾಧಿಗೆ ನೀಡುವ ಸತ್ಕಾರವು ಮರಣ ದಂಡನೆಗೆ ಸರಿಯಾದದ್ದು.

ಅಪರಾಧಿಗಳಿಗೆ ಸತ್ಕಾರ ಸಲ್ಲ. ಒಮ್ಮೆ ಅಪರಾಧಿಗಳಿಗೆ ಸತ್ಕಾರ ನೀಡಿದರೆ ಸಂಪೂರ್ಣ ದಂಡ ಸಂಹಿತೆಯೇ ಅರ್ಥ ಕಳೆದುಕೊಂಡೀತು. ಮರಣ ದಂಡನೆಯೇ ಅಪರಾಧಿಗಳಿಗೆ ನೀಡಬಹುದಾದ ಸತ್ಕೃತಿ ಎನ್ನುವ ಭಾಸ ಕವಿಯ ಮಾತು ಇಂದಿನ ಕೆಲವು ವಿದ್ಯಮಾನಗಳ ಹಿನ್ನೆಲೆಗಳಲ್ಲಿ ತೀರಾ ಪ್ರಸ್ತುತವೆನಿಸುತ್ತದೆ.

ನಮ್ಮ ದೇಶದ ಸ್ವಾಭಿಮಾನದ ಸಂಕೇತವಾದ ಪಾರ್ಲಿಮೆಂಟ್ ಭವನವನ್ನು ಸ್ಫೋಟಿಸಲು ಸಂಚು ರೂಪಿಸಿದ ಅಪ್ಜಲ್‌ನಿಗೆ ದೇಶದ ಸರ್ವೋಚ್ಚ ನ್ಯಾಯಾಲಯವೇ ಮರಣದಂಡನೆ ನೀಡಿದೆ. ಆದರೆ ಅದು ಅನುಷ್ಠಾನಕ್ಕೆ ಬರುತ್ತಿಲ್ಲ. ಅಪರಾಧ ಮಾಡಿದವರಿಗೆ ಉಗ್ರ ದಂಡನೆಬೇಕು. ಆಗ ಆತಂಕವಾದಿಗಳ ಹಾಗೂ ಉಗ್ರವಾದಿಗಳ ಹುಟ್ಟಡಗಿಸಬಹುದು. ಆದರೆ ಅಪರಾಧ ಮಾಡಿದವರನ್ನೆಲ್ಲಾ ರಾಜಕೀಯ ಲಾಭದ ಲೆಕ್ಕಾಚಾರದಲ್ಲಿ, ಅವರ ಶತಾಪರಾಧವನ್ನು ಮನ್ನಿಸಿ ಅವರನ್ನು ಉತ್ಸವ ಮೂರ್ತಿಯಂತೆ ಹೊತ್ತು ತಿರುಗಿದರೆ ದೇಶಕ್ಕೆ ಅಪಾಯ ತಪ್ಪಿದ್ದಲ್ಲ. ಅಪರಾಧಿಗಳ ವಿಷಯದಲ್ಲಿ ಒಂದು ಸರ್ಕಾರ ತಳೆಯುವ ಮೃದು ಧೋರಣೆಯಿಂದ ಪ್ರಜೆಗಳ ವಿತ್ತ-ಜೀವಿತಗಳು ಸುರಕ್ಷಿತವಲ್ಲ. ಅಧಿಕಾರದಲ್ಲಿ ಇರುವ ಕೆಲವರ ನಡೆನುಡಿ ದೇಶವೇ ನಾಚಬೇಕಾದ ಪರಿಸ್ಥಿತಿಯನ್ನು ತಂದೊಡ್ಡಿದೆ. ಅಪರಾಧಿಗಳ ಓಲೈಕಾ ವಿಧಾನದಿಂದ ಭವಿಷ್ಯದಲ್ಲಿ ಗಂಭೀರ ಸಮಸ್ಯೆ ಎದುರಾದೀತು.

**ಅದಂಡ್ಯೋ ನೈವ ದಂಡ್ಯತೇ**

***( ಅಭಿಷೇಖ ನಾಟಕಮ್ )***

ಇದು ಮರಣೋನ್ಮುಖನಾದ ವಾಲಿಗೆ ಶ್ರೀ ರಾಮಚಂದ್ರನ ಉತ್ತರ. ತಪ್ಪು ಮಾಡದವರು ಯಾರೇ ಇರಲಿ ಅವರು ಶಿಕ್ಷೆಯಿಂದ ತಪ್ಪಿಸಿಕೊಳ್ಳಲಾರರು ಮತ್ತು ತಪ್ಪು ಮಾಡದವರು ಶಿಕ್ಷೆಗೆ ಅರ್ಹರಲ್ಲ. ಇದೇ ನನ್ನ ಆಡಳಿತ ನೀತಿ ಎಂದು ಘೋಷಿಸಿದ ಮರ್ಯಾದಾ ಪುರುಷೋತ್ತಮ ಶ್ರೀ ರಾಮಚಂದ್ರ ಅಂತೆ ಆಚರಿಸಿ ತೋರಿಸಿದ. ಆದ್ದರಿಂದಲೇ 'ರಾಮರಾಜ್ಯ ಸಾಧ್ಯವಾಯಿತು'.

**ದಂಡ ಏವ ವರೋಲೋಕ ಪುರುಷಸ್ಯೇತಿ ಮೇ ಮತಿಃ**
**ಧಿಕ್ ಕ್ಷಮಾ ಮಕೃತಜ್ಞೇಷುಸಾಂತ್ವದಾನ ಮತಾಪಿವಾ॥**

***( ರಾಮಾಯಣ-ಯುದ್ಧ ಕಾಂಡ-ಸರ್ಗ-ಶ್ಲೋಕ 48 )***

ಅಂದರೆ ಪುರುಷನು ದಂಡೋಪಾಯವನ್ನು ಕೈಗೊಳ್ಳುವುದೇ ಉತ್ತಮ. ಕೃತಘ್ನರಲ್ಲಿ ಸಹನೆ, ಸಾಮ, ದಾನ, ಈ ಉಪಾಯಗಳು ಫಲಕಾರಿ ಆಗುವುದಿಲ್ಲ.

**ಶಾಮ್ಯೇತ್ಪ್ರತ್ಯಪಕಾರೇಣ ನೋಪಕಾರೇಣ ದುರ್ಜನಃ।**

***( ರಘುವಂಶ )***

ದುರ್ಜನರು ಉಪಕಾರದಿಂದ ಬಗ್ಗುವುದಿಲ್ಲ ಅವರಿಗೆ ಪ್ರತಿಕಾರವೇ ಸೂಕ್ತ. ದುಷ್ಟರ ವಿಷಯದಲ್ಲಿ ಮೃದು ಧೋರಣೆಯನ್ನು ತಾಳಿದರೆ ಅವರು ಅದನ್ನು ''ದೌರ್ಬಲ್ಯ''ಎಂದು ತಪ್ಪಾಗಿ ತಿಳಿಯುತ್ತಾರೆ. ಯಾಕೆಂದರೆ ಒಳ್ಳೆಯ ಭಾವನೆಗಳನ್ನು ಅರಿಯುವ ಸಂಸ್ಕಾರ ದುಷ್ಟರಿಗೆ, ಅನಾರ್ಯರಿಗೆ, ಜನ್ಮಜಾತವಾಗಿ ಇರುವುದಿಲ್ಲ.

ಅಯೋಗ್ಯರಿಗೆ ಮನ್ನಣೆ ಸಲ್ಲ. ಆದರೆ ಅರ್ಹರಿಗೆ ಮನ್ನಣೆ ಬೇಕು. ಇಂದು ಜೀವನದ ಎಲ್ಲಾ ರಂಗದಲ್ಲಿ ಕೆಟ್ಟ ರಾಜಕೀಯವು ಪ್ರವೇಶಿಸಿದ ಕಾರಣ ಸಕಲವೂ ಅಯೋಮಯವಾಗಿದೆ. ಮೆರಿಟ್ ಇದ್ದವರಿಗೆ ಅವಕಾಶ ಇಲ್ಲ. ಯಾವ ಯಾವದೋ ನೆಪದಲ್ಲಿ ಅರ್ಹತೆ ಇಲ್ಲದವರಿಗೆಲ್ಲ ಅಗ್ರಸ್ಥಾನ. ಇದರಿಂದ ಪ್ರತಿಭಾ ಪಲಾಯನ ಆರಂಭವಾಗುತ್ತದೆ. ದೇಶ ಸಹಜವಾಗಿಯೇ ದುರ್ಬಲವಾಗುತ್ತದೆ. ''ಉಗ್ರರಿಗೆ'' ''ನಕ್ಸಲೈಟ್'' ಗಳಿಗೆ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಕೊಡುವ ಪುರಸ್ಕಾರ. ಅನುಕಂಪ, ದೇಶವನ್ನು ತತ್ತರಿಸೀತು ಅಲ್ಲವೇ? ಅಪರಾಧಗಳಿಗೆ ಸತ್ಕಾರ ನೀಡಬಾರದು ಎನ್ನುವ ಭಾಸ ಕವಿಯ ವಾಣಿ ಅಂದಿಗೆ ಮಾತ್ರವಲ್ಲ ಇಂದಿಗೂ ಎಂದೆಂದಿಗೂ ಸತ್ಯ.



●

## ಪ್ರಕಟಣೆ

ನಮ್ಮ ಸಂಸ್ಥೆಯು ಕಳೆದ 6 ವರ್ಷಗಳಿಂದ ಯಶಸ್ವಿಯಾಗಿ 'ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ' ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಂಡು ಬಂದಿದೆ. ಕನ್ನಡ ಭಾಷೆ ಹಾಗೂ ಸಾಹಿತ್ಯದ ಇತಿಹಾಸದಲ್ಲಿ ಸದಾ ಅವಿಸ್ಮರಣೀಯರಾಗಿರುವ ಶ್ರೀ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿಯನ್ನು ಕನ್ನಡ ಸಾಹಿತ್ಯ, ಪತ್ರಿಕೋದ್ಯಮ ಹಾಗೂ ಸಮಾಜ ಸೇವೆ ಕ್ಷೇತ್ರಯಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿದ ವ್ಯಕ್ತಿಗೆ ನೀಡಲಾಗುವುದು. ಈ ವರ್ಷದ ಪ್ರಶಸ್ತಿಯನ್ನು ಸಮಾಜಸೇವೆ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗೆ ನೀಡಲಾಗುವುದು. ಈ ಶ್ರೇಷ್ಠ ಪ್ರಶಸ್ತಿಗೆ ಅರ್ಹರಾದ ವ್ಯಕ್ತಿಯ ಹೆಸರು ಹಾಗೂ ಅವರ ಸಾಧನೆಗಳ ವಿವರಗಳನ್ನು ನಮ್ಮ ಸದಸ್ಯರು ಸೂಚಿಸಬಹುದು. ಅವರ ಸೂಚನೆ ತಾ. 30.10.2011ರ ಒಳಗೆ ಕಲಿನಾ ಆಫೀಸಿಗೆ ತಲುಪಬೇಕು. ಈ ವಿಷಯದ ಬಗ್ಗೆ ನಿರ್ಣಾಯಕ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.







*PAGE DONATED BY : **SMT. TRIVENI BHATSHIKAR & SHRI R. T. BHATSHIKAR,** GHATKOPAR IN THE MEMORY OF **LATE SHRI T. R. BHATSHIKAR** (DEC.-2009)*

# ಸುಂದರ ಕಾಂಡ

*(ಹಿಂದಿನ ಸಂಚಿಕೆಯಿಂದ)*

31) ಅಗ್ನಿಯ ಧಗಧಗ ಉರಿಯುತ್ತಿತ್ತು
ಹನುಮಗೆ ಮಾತ್ರ ತಂಪಾಗಿತ್ತು ।
ಮೈಥಿಲಿದೇವಿಯ ಪಾತಿವ್ರತ್ಯದ
ಬಲದಿಂದನಲು ತಣ್ಣಗಾಗಿತ್ತು ॥ಸು॥

32) ಬೆಂಕಿ ಹತ್ತಿದ ಬಾಲದಿ ಹನುಮ
ಮನೆ ಮನೆಗಳನು ಉರಿಸಿದನು।
ಮನೋಜ್ಞವಾದ ಲಂಕಾ ನಗರಿ
ಭಸ್ಮವಾಗಿ ಹೋಯಿತು ನೋಡಿ ॥ಸು॥

33) ರಕ್ಕಸರೆಲ್ಲರು ಹಾಹಾಕಾರದಿ
ಹಾ ಪುತ್ರಾ ಹಾ ತಂದೆ ಎನ್ನುತ ।
ರೋದನ ಗೈದರು ಭಯದಿಂದ
ಅತ್ತಿತ್ತ ಓಡಿದರು ಭೀತಿಯಿಂದ ॥ಸು॥

34) ಪವನ ಕುಮಾರನು ಉರಿಯುವ ಬಾಲವನು
ಸಾಗರದಲ್ಲಿ ಮುಳುಗಿಸಿದ।
ತ್ವರಿತದಿಂದಲಿ ವನವನು ಸೇರಿ
ಸೀತಾಮಾತೆಗೆ ವಂದಿಸಿದ ॥ಸು॥

35) ರೋಹಿಣಿ ಚಂದ್ರನ ಸೇರುವ ಹಾಗೇ
ರಾಮನ ನೀನು ಸೇರುವೆಯಮ್ಮ ।
ರಾಮಚಂದ್ರನು ಶೀಘ್ರವೇ ಬರುವನು
ಲಂಕಾಧೀಶನ ಕೊಲ್ಲುವನು ॥ಸು॥

36) ಸೀತೆಯು ತನಗೆ ಹಿತವನು ಮಾಡಿದ
ಹನುಮಗೆ ವಿಶ್ರಾಮ ಮಾಡೆಂದಳು।
ರಾತ್ರಿಯ ಕಳೆದು ಮರುದಿನ ನೀನು
ಮರಳಿ ಊರಿಗೆ ಪೋಗೆಂದಳು ॥ಸು॥

37) ಬಲು ಸುಲಭದಿ ಆ ಸಮುದ್ರವ ದಾಟಿ
ಮಿತ್ರರ ಸೇರಿದ ಮಾರುತಿಯು ।
ಮಧವನಕ್ಕೋಗಿ ಮಧುವನು ಕುಡಿದು
ರಾಮನ ಪಾದಕೆ ಎರಗಿದನು ॥ಸು॥

38) ಮಾರುತಿ ರಾಯನು ಎಲ್ಲಾ ವಿಷಯವ
ಯಥಾ ತಥಾ ತಿಳಿಸಿದನು।
ಜಾನಕಿ ಕೊಟ್ಟ ಚೂಡಾಮಣಿಯನು
ರಾಮನ ಕೈಗೆ ಇಕ್ಕಿದನು ॥ಸು॥

39) ನೋಡಿ ಬಾ ಎಂದರೆ ಸುಟ್ಟು ಬಂದ
ಘನತೆಯು ನಿನಗೆ ದಕ್ಕುವುದು ।
ಹನುಮಂತ ನಿನಗೆ ಸಾಟಿಯಾರು
ಎಂದು ಕಪಿಗಳೆಲ್ಲ ಕೊಂಡಾಡಿದರು ॥ಸು॥

40) ಇಷ್ಟ ದೇವತೆ ವಾಯುಕುಮಾರನ
ಕತೆಯಿದು ಹನುಮಗೆ ಅರ್ಪಿತವು ।
ರಘುರಾಮನನು ಎದೆಯೊಳಗಿರಿಸಿದ
ಮಾರುತಿ ರಾಯಗೆ ಮಂಗಲವು ॥ಸು॥

*ಮೂಲ : ತೆಲುಗು* *ಕನ್ನಡಕ್ಕೆ ಅನುವಾದ : ಶ್ರೀಮತಿ ದೇವಿ ಭಟ್*



# ಚಿಂತನ – ಚಿಲುಮೆ

(ಜನವರಿ 2002ರಿಂದ ಚಿಮ್ಮುತ್ತಿರುವ ಚಿಲುಮೆ)

**ಪ್ರೊ। ಪಿ. ಎಂ. ಹೆಗಡೆ, ಶಿರಸಿ**

## ನಂಬಿ ಕೆಟ್ಟವರಿಲ್ಲವೊ

ಜಿಲ್ಲಾ ಕೇಂದ್ರ ಗ್ರಂಥಾಲಯದಿಂದ ಪುಸ್ತಕಗಳನ್ನು ಎರವಲು ಪಡೆಯಲೋಸುಗ ಮುಖ್ಯ ಗ್ರಂಥಪಾಲಕರನ್ನು ಭೇಟಿ ಮಾಡಿದೆ. ನಿಮ್ಮ ಗ್ರಂಥಾಲಯಕ್ಕೆ ನಾನೊಬ್ಬ ಸದಸ್ಯನಾಗಬೇಕೆಂದಿದ್ದೇನೆ. ಅದಕ್ಕೇನು ಮಾಡಬೇಕೆಂದು ಅವರನ್ನು ಕೇಳಿದೆ. ಅವರು ನನಗೊಂದು ಅರ್ಜಿ ನಮೂನೆಯನ್ನು ಕೊಟ್ಟು, ಅದನ್ನು ತುಂಬಿಕೊಂಡು ತನ್ನಿರಿ ಎಂದು ಹೇಳಿದರು. ಅದನ್ನು ತುಂಬಿಯಾದ ಮೇಲೆ ಅದರಲ್ಲಿ ನಮೂದಿಸಿದ ಶರತ್ತುಗಳ ಕಡೆ ನನ್ನ ಗಮನ ಹೋಯಿತು. ಜನ್ಮ ದಿನಾಂಕದ ದಾಖಲಾ ಪತ್ರ, ಶಾಶ್ವತ ವಿಳಾಸವನ್ನು ತೋರಿಸುವ ಪಡಿತರ ಚೀಟಿಯ ಒಂದು ನಕಲು ಇತ್ಯಾದಿಯಲ್ಲದೇ ಸರಕಾರ ಪ್ರಥಮ ದರ್ಜೆಯ ನೌಕರರೋರ್ವರ ಪ್ರಮಾಣ ಪತ್ರಕ್ಕೆ ಅವರ ಕಛೇರಿ ಮುದ್ರೆಯೊಡನೆ ಸಹಿ. ಇವನ್ನೆಲ್ಲ ಪೂರೈಸಲು ನನಗೆ ನಾಲ್ಕೈದು ದಿನಗಳೇ ಬೇಕಾದವು.

ಅಮೇರಿಕೆಯಲ್ಲಿ ನನ್ನ ಮಗಳ ಮನೆಗೆ ಹೋದಾಗ ನನ್ನನ್ನು ಅಲ್ಲಿಯ ಕೇಂದ್ರ ಗ್ರಂಥಾಲಯಕ್ಕೆ ಕರೆದೊಯ್ದಳು. ಅಲ್ಲಯ ಗ್ರಂಥ ಪಾಲಕಿಯ ಬಳಿಗೆ ಹೋಗಿ, ತಾನು ಗ್ರಂಥಾಲಯದ ಸದಸ್ಯೆಯಾಗುವ ಇಚ್ಛೆಯನ್ನು ವ್ಯಕ್ತಪಡಿಸಿದಳು. ಕೂಡಲೇ ಗ್ರಂಥಪಾಲಿಕೆಯು ನನ್ನ ಮಗಳ ಬಾಯಿಂದಲೇ ಬೇಕಾದ ಎಲ್ಲ ಮಾಹಿತಿ ಪಡೆದು ಕಂಪ್ಯೂಟರಿಗೆ ಫೀಡ್ ಮಾಡಿ ನೀವು ಸದಸ್ಯೆಯಾದಿರಿ ಎಂದಳು. ನಾವು ಎಷ್ಟು ಪುಸ್ತಕಗಳನ್ನು ಒಯ್ಯಬಹುದು? ಎಂದು ಕೇಳಿದ್ದಕ್ಕೆ ನಿಮ್ಮಿಂದ ಒಯ್ಯಲು ಶಕ್ಯವಾದಷ್ಟು ಎಂದು ಉತ್ತರಿಸಿದಳು. ನಂತರ ನಾನು ಆರಿಸಿಕೊಂಡ ಹತ್ತು ಹನ್ನೆರಡು ಪುಸ್ತಕಗಳನ್ನು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಆ ಗ್ರಂಥಪಾಲಕಿ ನಮಗೆ ವಿದಾಯ ಹೇಳಿದಳು.

ಎಲಿಕಟ್ ಸಿಟಿಯಿಂದ ಕ್ಯಾಂಟನ್ನಿಗೆ ಸುಮಾರು 540 ಮೈಲಿದೂರ. ಎಲಿಕಟ್ ಸಿಟಿಯಿಂದ ಬರುವಾಗ ಯಾವುದೋ ಪ್ರವಾಸಿ ಮಂದಿರದಿಂದ ಅನತಿ ದೂರದಲ್ಲಿ ರಸ್ತೆಯ ಪಕ್ಕದಲ್ಲಿ ಒಂದು ಮೇಜು, ಅದರ ಮೇಲೆ ಒಂದು ಬುಟ್ಟಿಯ ತುಂಬಿ ಸೇಬು ಹಣ್ಣಿನ ಗಾತ್ರದ ಟೊಮ್ಯಾಟೋ ಇಟ್ಟಿದ್ದರು. ಅದರ ಪಕ್ಕದಲ್ಲಿ ಒಂದು ಎಲೆಕ್ಟ್ರಾನಿಕ್ ತಕ್ಕಡಿ ಹಾಗೂ ಅದರ ಪಕ್ಕದಲ್ಲಿ ಹಣ ಹಾಕುವ ಒಂದು ಸಣ್ಣ ಪೆಟ್ಟಿಗೆ ಇಟ್ಟಿದ್ದರು. ಅಲ್ಲಿ ಯಾವ ಮನುಷ್ಯನೂ ಇರಲಿಲ್ಲ. ನಮ್ಮ ಕಾರು ನಿಲ್ಲಿಸಿ ಅಲ್ಲಿಗೆ ಹೋಗಿ ಎರಡು ಪೌಂಡ್ ಟೊಮ್ಯಾಟೊ ನಾವೆ ತೂಗಿಕೊಂಡು, ಅಲ್ಲಿಯೇ ಪಕ್ಕದಲ್ಲಿ ಅವರು ಬರೆದಿಟ್ಟ ದರದಂತೆ ಲೆಕ್ಕ ಮಾಡಿ ಹಣವನ್ನು ಪೆಟ್ಟಿಗೆಗೆ ಹಾಕಿ ನಮ್ಮ ಪ್ರಯಾಣವನ್ನು ಮುಂದುವರಿಸಿದೆವು.

ಓಪನ್ ಸೇಲ್‌ಗಾಗಿ (Opensale) ಅನೇಕ ಕಡೆಗಳಲ್ಲಿ ಅನೇಕ ತರಹದ ವಸ್ತುಗಳನ್ನು ಇಟ್ಟಿರುವದನ್ನು ನಾವು ನೋಡಬಹುದು. ಅಲ್ಲೆಲ್ಲೂ ಮಾರುವವರು ಇರದೆ ಕೇವಲ ಕೊಂಡುಕೊಳ್ಳುವವರು ಇರುತ್ತಾರೆ. ಹಣವನ್ನು ಇಡುವ ಜಾಗದಲ್ಲಿ ಇಡದೆ ಯಾರೂ ಹೋಗುವದಿಲ್ಲ. ಮಾರಾಟಗಾರರಿಗೆ ಕೊಳ್ಳುವವರ ಮೇಲೆ ಅಷ್ಟು ವಿಶ್ವಾಸ! ಆ ವಿಶ್ವಾಸಕ್ಕೆ ದ್ರೋಹ ಬಗೆಯುವವರು ಇಲ್ಲವೆಂದೇ ಹೇಳಬೇಕು. ಸತ್ಯ ಮೇವ ಜಯತೆ ಎಂಬ ಧ್ಯೇಯ ವಾಕ್ಯವನ್ನು ಉಚ್ಚರಿಸುವ ನಾವು ಎಷ್ಟು ಪ್ರಾಮಾಣಿಕರು ಮತ್ತು ಎಷ್ಟು ವಿಶ್ವಾಸಕ್ಕೆ ಪಾತ್ರರು ಎಂಬುದನ್ನು ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕು. ●

*PAGE DONATED BY : **SHRI V. G. BHAT, NIGDI** (DEC.-2011)*

# ಮೋಹನದಾಸ ಕರಮಚಂದ ಗಾಂಧೀಜಿಯವರ ಸಂಕ್ಷಿಪ್ತ ಆತ್ಮಕಥನ

*( ಹಿಂದಿನ ಸಂಚಿಕೆಯಿಂದ )*

ಶ್ರೀಮತಿ ಎಚ್.ಎಲ್. ಸೀತಾದೇವಿ, ಮೈಸೂರು

## 10) ಇಂಗ್ಲೆಂಡ್‌ನಲ್ಲಿ ವಿದ್ಯಾರ್ಥಿಯಾಗಿ

ಡಾ। ಮೆಹತಾ ಸೋಮವಾರ ನಮ್ಮನ್ನು ಹುಡುಕಿಕೊಂಡು ವಿಕ್ಟೋರಿಯಾ ಹೊಟೇಲಿಗೆ ಹೋಗಿದ್ದರಂತೆ. ನಾವು ಕೊಠಡಿ ಖಾಲಿ ಮಾಡಿರುವ ವಿಷಯ ತಿಳಿದು, ಹೊಸ ವಿಳಾಸ ಪಡೆದು ಅಲ್ಲಿಗೇ ಬಂದರು. ಅವರು ನಮ್ಮ ಕೊಠಡಿ, ಅಲ್ಲಿದ್ದ ಪೀಠೋಪಕರಣ ಇತ್ಯಾದಿಗಳನ್ನೆಲ್ಲಾ ನೋಡಿ ಒಮ್ಮೆ ಅಸಮ್ಮತಿ ಸೂಚಕವಾಗಿ ತಲೆ ಅಲ್ಲಾಡಿಸಿದರು. ''ಈ ಕೊಠಡಿ ಪ್ರಯೋಜನವಿಲ್ಲ. ನಾವು ಇಲ್ಲಿಗೆ ಬರುವುದು ಅಧ್ಯಯನಕ್ಕಿಂತ ಹೆಚ್ಚಾಗಿ, ಇಂಗ್ಲಿಷರ ಜೀವನದ ರೀತಿನೀತಿಗಳನ್ನು ಅರಿಯಲು, ಇಲ್ಲಿನ ಸಂಪ್ರದಾಯಗಳ ಅನುಭವ ಪಡೆಯಲು. ಅಂಥ ಅನುಭವ ಪಡೆಯಬೇಕಾದರೆ ನೀನು ಯಾವುದಾದರೂ ಸಂಸಾರದ ಜತೆಯಲ್ಲಿಯೇ ಇರಬೇಕು. ಅದಕ್ಕೂ ಮುಂಚೆ ನೀನು ಅವನ್ನೆಲ್ಲ ಕಲಿಯಲು ನನ್ನ ಗೆಳೆಯನೊಬ್ಬನ ಮನೆಯಲ್ಲಿರುವಿಯಂತೆ. ನಾನು ನಿನ್ನನ್ನು ಅಲ್ಲಿಗೆ ಕರೆದೊಯ್ಯುತ್ತೇನೆ'' ಎಂದರು ಮೆಹತಾ. ನಾನು ತುಂಬು ಕೃತಜ್ಞತೆಯಿಂದ ಆ ಸಲಹೆಯನ್ನು ಒಪ್ಪಿದೆ. ನಾನು ಆ ಮಿತ್ರನ ಮನೆಗೆ ಹೋದಾಗ ಆತ ನನ್ನನ್ನು ಆದರದಿಂದ ಸ್ವಾಗತಿಸಿ, ಸ್ವಂತ ಸಹೋದರನಂತೆ ನೋಡಿಕೊಂಡ. ಆತ ತುಂಬಾ ಕರುಣಾಮಯಿ. ಇಂಗ್ಲಿಷರ ರೀತಿ ರಿವಾಜು, ನಡೆವಳಿಕೆಯನ್ನು ಕಲಿಸಿಕೊಟ್ಟ. ಇಂಗ್ಲಿಷ್‌ನಲ್ಲಿ ಮಾತನಾಡುವುದನ್ನೂ ಅಭ್ಯಾಸ ಮಾಡಿಸಿದ. ಆದರೆ ಆಹಾರದ್ದೇ ನನಗೆ ಬಹು ದೊಡ್ಡ ಸಮಸ್ಯೆಯಾಯಿತು. ಉಪ್ಪು, ಹುಳಿ, ಖಾರವಿಲ್ಲದ ಬೇಯಿಸಿದ ತರಕಾರಿ ನನಗೆ ರುಚಿಸುತ್ತಿರಲಿಲ್ಲ. ನನಗಾಗಿ ಏನು ಮಾಡಬೇಕೆಂಬುದೇ ಮನೆಯ ಒಡತಿಗೆ ದೊಡ್ಡ ತಲೆ ನೋವಾಗಿತ್ತು. ಬೆಳಗಿನ ಉಪಾಹಾರಕ್ಕೆ ಗೋಧಿ ಹಿಟ್ಟಿನ ಅಂಬಲಿ ಮಾಡುತ್ತಿದ್ದರು. ಅದರಿಂದ ತಕ್ಕಮಟ್ಟಿಗೆ ಹೊಟ್ಟೆ ತುಂಬುತ್ತಿತ್ತು. ಆದರೆ ಮಧ್ಯಾಹ್ನ ಹಾಗೂ ರಾತ್ರಿಯ ಊಟದಿಂದ ನನಗೆ ಹೊಟ್ಟೆ ತುಂಬುತ್ತಿರಲಿಲ್ಲ. ಉಪವಾಸವೇ ಗತಿಯಾಗಿತ್ತು. ನಾನು ಮಾಂಸ ತಿನ್ನಬೇಕೆಂದು ಆತ ಒತ್ತಾಯಿಸುತ್ತಲೇ ಇದ್ದ. ನಾನು ನನ್ನ ಪ್ರತಿಜ್ಞೆಯ ವಿಷಯ ಹೇಳಿ ಆತನನ್ನು ಸುಮ್ಮನಾಗಿಸುತ್ತಿದ್ದೆ. ಎರಡು ಹೊತ್ತಿನ ಊಟಕ್ಕೂ ಬ್ರೆಡ್, ಜಾಮ್ ಇರುತ್ತಿತ್ತು. ಆದರೆ ಹಾಲು ಇರುತ್ತಿರಲಿಲ್ಲ. ನಾನು ಚೆನ್ನಾಗಿ ಊಟ ಮಾಡುತ್ತಿದ್ದವನು. ಜೊತೆಗೆ ಹಸಿವೂ ಜಾಸ್ತಿ. ಆದರೆ ಎರಡು-ಮೂರು ತುಂಡಿಗಿಂತ ಹೆಚ್ಚು ಬ್ರೆಡ್ ಕೇಳಲು ಸಂಕೋಚವಾಗುತ್ತಿತ್ತು.

ಇದನ್ನೆಲ್ಲ ನೋಡಿ ಆ ನನ್ನ ಮಿತ್ರ ಬೇಸತ್ತ. 'ನೀನು ನನ್ನ ಸ್ವಂತ ತಮ್ಮನೇ ಆಗಿದ್ದಿದ್ದರೆ ಗಂಟುಮೂಟೆ ಕಟ್ಟಿ ಊರಿಗೆ ಕಳಿಸಿಬಿಡುತ್ತಿದ್ದೆ. ಇಲ್ಲಿಯ ಪರಿಸ್ಥಿತಿಯ ಅರಿವಿಲ್ಲದ, ಓದು ಬರಹ ಬಾರದ ನಿನ್ನ ತಾಯಿಯ ಮುಂದೆ ಮಾಡಿದ ಪ್ರತಿಜ್ಞೆಗೆ ಏನು ಬೆಲೆ? ಕಾನೂನಿನ ಪ್ರಕಾರ ಅದು ಪ್ರತಿಜ್ಞೆಯೇ ಅಲ್ಲ. ಅಂಥ ಮಾತಿಗೆ ಕಟ್ಟು ಬೀಳುವುದು ಬರೀ ಮೂಢನಂಬಿಕೆ, ಅಂಧವಿಶ್ವಾಸ. ಅಂಥ ಹಟಮಾರಿತನದಿಂದ ನೀನು ಏನನ್ನೂ ಸಾಧಿಸಲಾರೆ. ಅನಗತ್ಯವಾಗಿದ್ದಾಗ ನೀನು ಇಷ್ಟಪಟ್ಟು ಮಾಂಸ ತಿಂದು ತಪ್ಪೊಪ್ಪಿಕೊಂಡಿದ್ದೀಯ. ಇಲ್ಲಿ ತೀರಾ ಅಗತ್ಯವಾಗಿರುವಾಗ ತಿನ್ನುವುದಿಲ್ಲ ಎಂದು ಹಟ ಮಾಡುತ್ತೀಯ. ಇದೆಂಥ ವಿಚಿತ್ರ ಪಾಡು ನಿನ್ನದು' ಎಂದಾತ ತರಾಟೆಗೆ ತೆಗೆದುಕೊಂಡ. ಆದರೂ ನಾನು ಜಪ್ಪೆನ್ನಲಿಲ್ಲ. ನನ್ನ ನಿರ್ಧಾರವನ್ನು ಬದಲಾಯಿಸಲಿಲ್ಲ. ಮಿತ್ರ ಹಗಲೂ ರಾತ್ರಿ ನನ್ನೊಂದಿಗೆ ವಾದಿಸುತ್ತಲೇ ಇದ್ದ. ಆದರೆ ನನ್ನದು ಮಾತ್ರ ಸದಾ ಒಂದೇ ನಕಾರ. ಅವ ಹೆಚ್ಚು ಹೆಚ್ಚಾಗಿ ಒತ್ತಾಯಿಸುತ್ತಾ ಹೋದಂತೆಲ್ಲಾ ನನ್ನ ನಿರ್ಧಾರವೂ ದೃಢವಾಗುತ್ತಲೇ ಹೋಯಿತು. 'ನಾನು ದೇವರೇ, ನನ್ನನ್ನು ರಕ್ಷಿಸು' ಎಂದು ಮೊರೆ ಇಡುತ್ತಿದ್ದೆ. ನನಗೆ ದೇವರ ಕಲ್ಪನೆ ಇರಲಿಲ್ಲವಾದರೂ ದಾದಿ ರಂಭಾ ಬಿತ್ತಿದ್ದ ನಂಬಿಕೆಯ ಬೀಜ ಕೆಲಸ ಮಾಡಿತು.

ಮಾಂಸಾಹಾರ ತಿನ್ನುವುದು ಅವಶ್ಯಕ ಸರಿ. ಆದರೆ ನಾನು ಪ್ರತಿಜ್ಞಾಭಂಗ ಮಾಡಲಾರೆ. ಈ ವಿಷಯದಲ್ಲಿ ಚರ್ಚೆಯೂ ಬೇಡ. ವಾದದಲ್ಲಿ ನಾನು ನಿಮ್ಮನ್ನು ಜಯಿಸಲಾರೆ. ನಾನೊಬ್ಬ ಮೂರ್ಖ, ಹಠವಾದಿ ಎಂದರೂ ಸರಿ. ನನ್ನ ಪಾಡಿಗೆ ನನ್ನನ್ನು ಬಿಟ್ಟುಬಿಡಿ. ನೀವು ನನ್ನ ಹಿತೈಷಿಗಳು. ನನ್ನ ಬಗ್ಗೆ ಪ್ರೀತಿ, ಕನಿಕರ ಇರುವುದರಿಂದಲೇ ಇಷ್ಟೆಲ್ಲಾ ಹೇಳುತ್ತಿದ್ದೀರಿ ಎಂಬುದೂ ಗೊತ್ತು. ಆದರೆ ನನಗೆ ಬೇರೆ ದಾರಿ ಇಲ್ಲ. ಪ್ರತಿಜ್ಞೆ ಪ್ರತಿಜ್ಞೆಯೇ. ಅದನ್ನು ಯಾವುದೇ ಕಾರಣಕ್ಕೂ ಮುರಿಯಲಾಗದು ಎಂದು ನಾನು ಆ ಮಿತ್ರರಿಗೆ ಸ್ಪಷ್ಟವಾಗಿ ತಿಳಿಸಿಬಿಟ್ಟೆ. ಆಶ್ಚರ್ಯಗೊಂಡ ಆತ 'ಸರಿ ಬಿಡು, ನಾನು ಹೆಚ್ಚು ಹೇಳುವುದಿಲ್ಲ' ಎಂದ. ಅಷ್ಟಾದರೂ ಅವರು ನನ್ನ ಹಿತಚಿಂತನೆ ಮಾಡುವುದನ್ನು ಬಿಡಲಿಲ್ಲ. ಅವರು ಕುಡಿಯುತ್ತಿದ್ದರು, ಧೂಮಪಾನ ಮಾಡುತ್ತಿದ್ದರು. ಆದರೆ ಎಂದೂ ನನಗೆ ಆ ವಿಷಯದಲ್ಲಿ ಬಲವಂತ ಮಾಡಲಿಲ್ಲ. ವಾಸ್ತವವಾಗಿ ಅಂಥ ಚಟುವಟಿಕೆಗಳನ್ನು ಹತ್ತಿರ ಸುಳಿಯಗೊಡಬೇಡ ಎಂದು ಎಚ್ಚರಿಸಿದ್ದರು. ಆದರೆ ಮಾಂಸಾಹಾರವಿಲ್ಲದಿದ್ದರೆ ನಾನು ತೀರಾ ನಿಶ್ಶಕ್ತನಾಗಿ ಹೋಗುತ್ತೇನಲ್ಲಾ ಎಂಬುದೊಂದೇ ಅವರ ಚಿಂತೆಯಾಗಿತ್ತು. ಹೀಗೆ ನಾನು ಆ ಮಿತ್ರರ ಮನೆಯಲ್ಲಿ ಒಂದು ತಿಂಗಳಿದ್ದು ಅನುಭವ ಪಡೆದೆ. ಆಮೇಲೆ ವೆಸ್ಟ್ ಕೆನ್ಸಿಂಗ್ಟನ್‌ನಲ್ಲಿ ಒಬ್ಬ ಆಂಗ್ಲೋ ಇಂಡಿಯನ್ನರ ಮನೆಯಲ್ಲಿ ಇರಲಾರಂಭಿಸಿದೆ. ಇಷ್ಟು ಹೊತ್ತಿಗೆ ನನ್ನ ರೆಕ್ಕೆ ಬಲಿಯಲಾರಂಭಿಸಿತು.

ನಾನು ಇನ್ನೂ ಕ್ರಮಬದ್ಧವಾಗಿ ನನ್ನ ವ್ಯಾಸಂಗವನ್ನು ಆರಂಭಿಸಿರಲಿಲ್ಲ. ಭಾರತದಲ್ಲಿ ನಾನೆಂದೂ ವೃತ್ತ ಪತ್ರಿಕೆಯನ್ನು ಓದುತ್ತಿರಲಿಲ್ಲ. ಇಲ್ಲಿ ಶುಕ್ಲ ಅವರ ಪ್ರೇರಣೆಯಂತೆ ವೃತ್ತ ಪತ್ರಿಕೆಗಳನ್ನು ಓದುವ ಅಭ್ಯಾಸ ಮಾಡಿಕೊಂಡೆ. ಡೈಲಿ ನ್ಯೂಸ್, ಡೈಲಿ ಟೆಲಿಗ್ರಾಫ್, ಪೇಲ್‌ಮೇಲ್ ಗೆಜೆಟ್‌ಗಳನ್ನು ನಿತ್ಯವೂ ತಿರುವಿ ಹಾಕಲಾರಂಭಿಸಿದೆ. ಅದೆಲ್ಲಾ ಒಂದು ಗಂಟೆಯಲ್ಲಿ ಮುಗಿದು ಹೋಗುತ್ತಿತ್ತು. ಉಳಿದ ಸಮಯದಲ್ಲಿ ಸಸ್ಯಾಹಾರಿ ಉಪಾಹಾರ ಗೃಹವನ್ನು ಹುಡುಕಿಕೊಂಡು ತಿರುಗಾಡುತ್ತಿದ್ದೆ.

ಪ್ರತಿದಿನವೂ ೧೦-೧೨ ಮೈಲಿ ನಡೆದು, ಕೊನೆಗೂ ಒಂದು ಅಗ್ಗವಾದ ಶಾಖಾಹಾರಿ ಉಪಾಹಾರ ಗೃಹವನ್ನು ಪತ್ತೆ ಹಚ್ಚಿದೆ. ಅಂದು ಮೊದಲ ಬಾರಿಗೆ ಹೊಟ್ಟೆ ತುಂಬಾ, ತೃಪ್ತಿಯಾಗುವಷ್ಟು ರೊಟ್ಟಿಯನ್ನು ತಿಂದೆ. ನನಗಾದ ಸಂತೋಷ ಹೇಳತೀರದು. ಅದಕ್ಕೂ ಮುನ್ನ ಪ್ರದರ್ಶನಕ್ಕಿಟ್ಟಿದ್ದ ಒಂದು ಪುಸ್ತಕ ನನ್ನ ಗಮನ ಸೆಳೆಯಿತು. ಶಾಖಾಹಾರದ ಬಗ್ಗೆ ಹೋವರ್ಡ್ ವಿಲಿಯಂಸ್‌ರವರು ಬರೆದ "ಆಹಾರನೀತಿ" ಎಂಬ ಪುಸ್ತಕ ಅದು. ಪೈಥಾಗರಸ್‌ನಿಂದ ಮೊದಲ್ಗೊಂಡು ಏಸುಕ್ರಿಸ್ತನ ವರೆಗೆ ಎಲ್ಲ ದಾರ್ಶನಿಕರೂ ದ್ರಷ್ಟಾರರೂ ಶಾಖಾಹಾರಿಗಳೇ ಆಗಿದ್ದರೆಂದು ಸ್ಥಾಪಿಸಲು ಆ ಗ್ರಂಥದಲ್ಲಿ ಪ್ರಯತ್ನವಿತ್ತು. ಇನ್ನೊಂದು ಪುಸ್ತಕ ಡಾ। ಆಲಿಸನ್‌ರು ಬರೆದ 'ಆಹಾರದ ನೈರ್ಮಲ್ಯ'. ಇದರಲ್ಲಿ ಆಹಾರವನ್ನು ನಿಯಮಿತಗೊಳಿಸುವುದರಿಂದಲೇ ರೋಗಗುಣವಾಗುವ ವಿಧಾನವನ್ನು ಪ್ರತಿಪಾದಿಸಿದ್ದರು. ಅವನ್ನು ಕೊಂಡು ಮೊದಲಿನಿಂದ ಕೊನೆಯವರೆಗೆ ಓದಿದೆ. ಅವು ನನಗೆ ತುಂಬಾ ಇಷ್ಟವಾಯಿತು. ಅಷ್ಟೇ ಅಲ್ಲ, ತುಂಬಾ ಗಾಢವಾದ ಪ್ರಭಾವ ಬೀರಿತು. ಅಂದಿನಿಂದ ನಾನು ಮನಃಪೂರ್ವಕವಾಗಿ ಶಾಖಾಹಾರಿಯಾದೆ. ತಾಯಿಗೆ ಮಾತು ಕೊಟ್ಟ ದಿನವನ್ನು ಜ್ಞಾಪಿಸಿಕೊಂಡೆ. ಅಲ್ಲಿಯವರೆಗೆ ನಾನು ಸತ್ಯ ನಿಷ್ಠೆ ಹಾಗೂ ತಾಯಿಗೆ ವಚನವಿತ್ತಿದ್ದ ಕಾರಣಕ್ಕಾಗಿ ಅಷ್ಟೇ ಸಸ್ಯಾಹಾರಿಯಾಗಿದ್ದೆ. ಆದರೆ ಈ ಪುಸ್ತಕ ಓದಿದ ನಂತರ ಮನಸಾ ಶಾಖಾಹಾರಿಯಾದೆ. ಮುಂದೆ ಶಾಖಾಹಾರದ ಪ್ರಸಾರವೇ ನನ್ನ ಜೀವನದ ಧ್ಯೇಯವಾಯಿತು.

*(ಮುಂದುವರಿಯುವುದು)*

# ಅರಳುವ ಮನಸು ಹಣದ ಬೆಲೆ ಅರಿತಿರಲಿ

**ಭವ್ಯಾ ಹೆಗಡೆ, ಹಳೆಯೂರು**

ಕಾಲೇಜಿನ ಮೋಜಿಗಾಗಿ ಎಲ್ಲೆ ಇಲ್ಲದೇ ಬೇಕಾಬಿಟ್ಟಿ ಖರ್ಚು ಮಾಡುವ, ಹಣದ ಬೆಲೆಯೇ ಅರಿಯದೇ ಮರೆಯುವ ಪ್ರತಿಯೊಂದು ಮನಸ್ಸೂ ಒಮ್ಮೆ ತನ್ನ ಚೌಕಟ್ಟಿನಿಂದ ಹೊರಬಂದು ಯೋಚಿಸುವಂತಾಗಬೇಕು.

ಮೋಜಿನ ಪಾರ್ಟಿಗಾಗೋ, ಹಾಳು ಹರಟೆ ಹೊಡೆದು ಖರ್ಚು ಮಾಡಿದ ಮೊಬೈಲ್ ಕರೆನ್ಸಿಗಾಗೋ, ಶೋಕಿಗೆಂದು ಹಾಕುವ ದುಬಾರಿ ಬೆಲೆಯ ಉಡುಪಿಗಾಗೋ, ಸುಮ್ಮನೇ ವೇಳೆ ಕಳೆಯಲೆಂದು ಹೋಗುವ ಸಿನಿಮಾ ಟಿಕೆಟ್‌ಗಾಗೋ ಹೀಗೆ ಹಲವಾರು ಕಾರಣಗಳಿಗಾಗಿ ವ್ಯಯಿಸುವ ಹಣದ ಬಗೆಗೆ ಮೊಗ್ಗಿನ ಮನಸ್ಸು ಸ್ವಲ್ಪವೂ ಯೋಚಿಸಿರುವುದೇ ಇಲ್ಲ! ತನ್ನ ಮನಸ್ಸಿನ ಖುಶಿಗಾಗಿಯೋ, ಆ ಕ್ಷಣದ ಸಂತೋಷಕ್ಕಾಗಿಯೋ ಖರ್ಚು ಮಾಡಿದ ಆ ಹಣ ಆ ಮೊಗ್ಗಿನ ಮನಸ್ಸಿನ ಸ್ವಂತ ಪಾಲಕರ ಅದೆಷ್ಟೋ ಬೆವರ ಹನಿಯ ಕೂಡಿಕೆಯಾಗಿರುತ್ತದೆ ಎಂಬುದರ ಅರಿವೇ ಇರುವುದಿಲ್ಲ. ಅವರು ಅಲ್ಲಿ ತಮ್ಮ ಜೀವ ತೇಯ್ದು ಹನಿ-ಹನಿಯಾಗಿ ಗಳಿಸಿದ ಹಣ ಇಲ್ಲಿ ಮತ್ತೊಂದು ಜೀವದ ಮೋಜಿಗಾಗಿ ಬೆಲೆಯೇ ಇಲ್ಲದೇ ಖಾಲಿಯಾಗುತ್ತದೆ! ಎಂಥ ವಿಚಿತ್ರ ಅಲ್ವಾ?

ಅಂದು ಅದ್ಯಾವುದೋ ವಿಷಯ ಮೇಲೆ ಅವರೀರ್ವರೂ ಬೆಟ್ಟು ಕಟ್ಟಿದ್ದರು. ಅದರಲ್ಲಿ ಒಬ್ಬ ಸೋತ. ಅವರ ಕರಾರಿನಂತೆ ಸೋತವರು ಗೆದ್ದವರಿಗೆ 500 ರೂ. ಗಳನ್ನು ಕೊಡಬೇಕು. ಆತ ಮಾರನೇ ದಿನವೇ ತಂದುಕೊಟ್ಟ. ಇವಿಷ್ಟನ್ನೇ ಕೇಳಿದರೆ ನಿಮಗೆ ಈಗಿನ ಮಕ್ಕಳಿಗೆ ದುಡ್ಡಿನ ಬೆಲೆಯೇ ಗೊತ್ತಿಲ್ಲ ಎನ್ನಿಸಬಹುದು. ಇಲ್ಲವೇ ಸಾಮಾನ್ಯ ಎನ್ನಿಸಬಹುದು. ಹೌದು, ಸಾಮಾನ್ಯವೇ. ಶಾಲೆಗೆ ಹೋಗುವ ಒಂದು ಪುಟ್ಟ ಮಗುವೂ ಈಗ ಬೆಟ್ಟು ಕಟ್ಟುತ್ತದೆ. ಹಾಗಾಗಿ ಇದೂ ಸಹ ಮೇಲ್ನೋಟಕ್ಕೆ ಸಾಮಾನ್ಯ ಎಂದೇ ಅನಿಸುತ್ತದೆ. ಇದು ಎಂಬುದಲ್ಲ ಎಲ್ಲವೂ ಹಾಗೆಯೇ. ಹೊರಗಿನಿಂದ ನೋಡುವವರಿಗೆ ಅದು ಸಾಮಾನ್ಯವೇ. ಆದರೆ ಆ ವಿಷಯದ ಆಳಕ್ಕಿಳಿದು ನೋಡಿದಾಗ ಅದರ ಕರಾಳ ರೂಪದ ದರ್ಶನವಾಗುತ್ತದೆ! ಇಲ್ಲಿ ಆಗುವುದು ಹಾಗೆಯೇ. ಸೋತವನು ಒಬ್ಬ ಹಮಾಲಿಯ ಮಗ! ಗಂಡ-ಹೆಂಡಿರಿಬ್ಬರೂ ಕೂಲಿ ಮಾಜಿ ಮಗನನ್ನು ಅಕ್ಷರಸ್ಥನನ್ನಾಗಿ ಮಾಡಬೇಕೆಂಬ ಹಂಬಲದಿಂದ ಕಾಲೇಜಿಗೆ ಕಳಿಸುತ್ತಿದ್ದಾರೆ. ಮಗನಿಗೆ ಯಾವುದೇ ರೀತಿಯಲ್ಲೂ ಬಡತನದ ಕಪ್ಪು ನೆರಳು ಬೀಳಬಾರದೆಂದು ಜಾಗೃತೆ ವಹಿಸಿದ್ದಾರೆ. ಅವನಿಗೆ ಹಣ ಬೇಕೆಂದಾಗಲೆಲ್ಲಾ ಒಂದು ಹೊತ್ತು ಹೆಚ್ಚು ದುಡಿದು ಕೊಡುತ್ತಾರೆ. ಆದರೆ ಆತ ಸ್ನೇಹಿತರ ದಂಡನ್ನೇ ಕಟ್ಟಿಕೊಂಡಿದ್ದಾನೆ.

ಶ್ರೀಮಂತರ ಮಕ್ಕಳಾದ ಅವರೆಲ್ಲರ ಸಮಾನವಾಗಿ ಈತನೂ ಖರ್ಚು ಮಾಡಲು ಪ್ರಯತ್ನಿಸುತ್ತಿದ್ದಾನೆ. ಅಂದು ಹಾಗೆಯೇ. ಯಾವುದೋ ಒಂದು ಸುಳ್ಳು ಹೇಳಿ ಮನೆಯಿಂದ 500 ರೂ.ಗಳನ್ನು ತಂದಿದ್ದಾನೆ. ಮಗನ ವಿದ್ಯಾಭ್ಯಾಸಕ್ಕೆ ಇರಬಹುದೆಂದು ತಂದೆಯೂ ಒಡೆಯನ ಬಳಿ ಸಾಲ ಮಾಡಿ ತಂದಿದ್ದಾರೆ. ಅದೇ 500 ರೂ. ಅವರೀರ್ವರಿಗೆ ಒಂದು ವಾರ ಹೊಟ್ಟೆ ತುಂಬಿಸಿಕೊಳ್ಳಲು ನೆರವಾಗುತ್ತಿತ್ತು! ಪ್ರೀತಿಯ ಮೊಗ್ಗಿನ ಮನಸ್ಸೇ ನೀವೂ ಖರ್ಚು ಮಾಡುವ ಹಣವೂ ಇದೇ ರೀತಿಯ ಹಿನ್ನೆಲೆಯಲ್ಲಿ ಬಂದಿದ್ದಿರಬಹುದು! ನಮ್ಮ ಮೋಜಿಗೆಂದು ಹಾಳಾಗುವ ಆ ಹಣ ಅದೆಷ್ಟೋ ಜೀವಗಳ ಹಸಿವನ್ನು ಇಂಗಿಸಿ ಜೀವಶಕ್ತಿಯಾಗಿರಬಹುದು. ಅವರ ತುತ್ತನ್ನು ಕಿತ್ತುಕೊಂಡ ಪಾಪ ನಿಮ್ಮದಾಗಬಹುದು. ಕ್ಷಣದ ಮೋಜಿಗಾಗಿ ನೀವು ಮಾಡಿದ ಖರ್ಚಿನಿಂದಾಗಿ ಒಂದು ಜೀವ ಹಸಿವಿನಿಂದ ನರಳುತ್ತದೆಂದರೆ ಅಂತಹ ಮೋಜು ನಿಮಗೆ ಬೇಕಾ?

ಗುಂಪಾಗಿ ಮಾಡುವ ಪಾರ್ಟಿ, ಯಾವ ಯಾವುದೋ ವಿಷಯಕ್ಕಾಗಿ ಕೊಟ್ಟುಕೊಳ್ಳುವ ಗಿಫ್ಟ್ ಅನಿವಾರ್ಯವಲ್ಲದಿದ್ದರೂ ಬೇಕೆ ಬೇಕೆನಿಸುವ ವಸ್ತು, ಬೆಲೆ ಬಾಳುವ ಉಡುಗೆ-ತೊಡಿಗೆ, ಅತೀ ಹೆಚ್ಚಿನ ಬೆಲೆಯದೇ ಆದ ಮೊಬೈಲ್, ಬೈಕ್, ವಾರಗಟ್ಟಲೇ ಕ್ಲಾಸಿಗೆ ರಜೆ ಹಾಕಿ ಹೋಗುವ ಜಾಲಿ ಟ್ರಿಪ್ ಹೀಗೆ ಮೊಗ್ಗಿನ ಮನಸ್ಸಿಗೆ ಹಣ ಖರ್ಚು ಮಾಡಲು ಅದೆಷ್ಟೋ ದಾರಿಗಳಿವೆ. ಅವನ್ನೆಲ್ಲಾ ಸುಸಜ್ಜಿತವಾಗಿ ಬಳಸುತ್ತವೆ ಕೂಡ. ಶಿಸ್ತಿಗೆಂದು ಸಮವಸ್ತ್ರ ಪದ್ಧತಿ ರೂಢಿಗೆ ಬಂತು. ತಾವು ಎಲ್ಲರಿಗಿಂತಲೂ ವಿಭಿನ್ನವಾಗಿರಬೇಕೆಂದೋ ಅಥವಾ ತಾನು ಈ ಪದ್ಧತಿಗೆ ಒಳಪಡುವುದಿಲ್ಲ ಎಂಬ ಸೊಕ್ಕಿನಿಂದಲೋ ಸಮವಸ್ತ್ರ ಧರಿಸದೇ ಬರುವವರಿಗೆ ಇಂತಿಷ್ಟು ಎಂಬ ಫೈನು. ಅಷ್ಟೇ ತಾನೇ... ನೀಡಿದರಾಯಿತು ಎಂಬ ಉದಾರ ಮನೋಭಾವ! ಇದು ಹಣದ ಬೆಲೆಯೇ ಅರಿಯದ ಮನಸ್ಸು ಯೋಚಿಸುವ ಪರಿ. ಕೆಲವರಿಗೆ ಪಾಲಕರೇ ತಿಂಗಳಿಗೆ ಇಂತಿಷ್ಟು ಎಂದು ಪಾಕೆಟ್ ಮನಿ ನೀಡಿ ಕಲಿಸಿರುತ್ತಾರೆ. ಇನ್ನು ಕೆಲವರು ನೆಪಹೇಳಿ ದುಡ್ಡು ತೆಗೆದುಕೊಂಡು ಬಂದಿರುತ್ತಾರೆ. ದುಡ್ಡಿಗಾಗಿ ಏನಾದರೊಂದು ನೆಪ ಎಂದಾಗ ಒಂದು ಘಟನೆ ನೆನಪಾಗುತ್ತದೆ.

ಅದು ಬಡ ಕುಟುಂಬ. ತಂದೆ-ತಾಯಿ ಇಬ್ಬರೂ ಅನಕ್ಷರಸ್ಥರೇ, ಮಗ ಕಾಲೇಜಿನ ಮೆಟ್ಟಿಲೇರಿ ಸ್ವಲ್ಪ ಬುದ್ಧಿವಂತ ಎನ್ನಿಸಿಕೊಂಡಿದ್ದಾನೆ. ಆತ ದೂರದ ನಗರದಲ್ಲಿದ್ದು ಕಲಿಯುತ್ತಿದ್ದಾನೆ. ಅವನ ಜೊತೆ ಇರುವವರೆಲ್ಲಾ ಶ್ರೀಮಂತರ ಮಕ್ಕಳು. ತುಂಬ ಹಣ ಖರ್ಚು ಮಾಡುತ್ತಿರುತ್ತಾರೆ. ಇವನಿಗೆ ಮನೆಯಲ್ಲಿ ಮೋಜು ಮಾಡಲು ಹಣ ಕೊಡಿ ಎಂದರಾಗುತ್ತದೆಯೇ? ಅದಕ್ಕಾಗಿ ಏನಾದರೊಂದು ಕಾರಣ ಹುಟ್ಟು ಹಾಕುತ್ತಿದ್ದ. ಹಾಗೆಯೇ ಆ ಬಾರಿಯೂ ಅವನಿಗೆ ಹಣ ಬೇಕಾಗಿತ್ತು. ಅದಕ್ಕೆ ಪಾಲಕರ ಬಳಿ ಹೇಳಲು ಒಂದು ಉಪಾಯ ಮಾಡಿದ. ಅದಕ್ಕೆ ತಂದೆಯ ಬಳಿ ಹೋಗಿ "ಅಪ್ಪಾ, ನಮಗೆ ಟೈಮ್ ಟೇಬಲ್ ಕೊಡ್ತಾರೆ. ಅದನ್ನು ತೆಗೆದುಕೊಳ್ಳಲು 500 ರೂ.ಕೊಡಬೇಕು" ಎಂದು ಹೇಳುತ್ತಾನೆ! ಪಾಪ, ಅನಕ್ಷರಸ್ಥ ತಂದೆ, ತನ್ನ ಮಗ ತನಗೆ ಮೋಸ ಮಾಡುವುದಿಲ್ಲ ಎಂದು ನಂಬಿದ್ದ ಆತ, ಇದ್ಯಾವುದೋ ದೊಡ್ಡ ಟೇಬಲ್ಲು ಇರಬೇಕು ಎಂದು "ಮಗಾ, ಹುಶಾರು" ಎಂದು 500 ರೂ. ಗಳನ್ನು ಆತನ ಕೈಲಿಟ್ಟ. ಎಂಥ ಮೋಸ ನೋಡಿ, ಈ ಮೊಗ್ಗಿನ ಮನಸ್ಸಿನದು!

ಒಮ್ಮೊಮ್ಮೆ ಈ ಮೊಗ್ಗಿನ ಮನಸ್ಸು ಇವೆಲ್ಲದಕ್ಕೂ ಮೀರಿ ವರ್ತಿಸಲಾರಂಭಿಸುತ್ತದೆ. ತನ್ನ ಜೀವನವನ್ನು ಹಾಗೂ ಜೀವನವನ್ನು ತನ್ನ ಕೈಯಾರೆ ಕೊಲೆ ಮಾಡಲಾರಂಭಿಸುತ್ತದೆ. ಅದಕ್ಕೆ ಚಟ ಆಯುಧವಾಗಿರುತ್ತದೆ. ಜೀವನವನ್ನು ಅರಳಿಸಿಕೊಳ್ಳಲು ಎಂದು ಬರುವ ಅದೆಷ್ಟೋ ಮೊಗ್ಗಿನ ಮನಸ್ಸುಗಳಲ್ಲಿ ಶೇಕಡಾ 80 ಕ್ಕೂ ಹೆಚ್ಚಿನವು ಚಟಗಳಿಗೆ ದಾಸರಾಗಿರುತ್ತವೆ. ಅದರಲ್ಲಿ 60 ಗುಟಕಾಗಳಿಗೆ ಸೀಮಿತವಾದರೆ ಮತ್ತುಳಿದ 20 ಸಿಗರೇಟ್, ಬಾರ್‌ಗಳ ವರೆಗೂ ತಮ್ಮ ಕೈಯನ್ನು ಚಾಚಿರುತ್ತವೆ. ತಾವು ಎಂತಹ ಮಹಾಪರಾಧವನ್ನು ಮಾಡುತ್ತಿದ್ದೇವೆ ಎಂಬುದರ ಅರಿವೂ ಇರದೇ ತಮ್ಮದೇ ಆದ ಲೋಕದಲ್ಲಿ ಓಡಾಡಿಕೊಂಡಿರುವ ಮೊಗ್ಗಿನ ಮನಸ್ಸನ್ನು ನಮ್ಮ ಸುತ್ತಲೂ ನಾವು ನೋಡುತ್ತಲೇ ಇದ್ದೇವೆ. ಇದಕ್ಕೆ ನಮ್ಮ ನಗರದ ಕಾಲೇಜು ರಸ್ತೆಯ ಕೆಲ ಅಂಗಡಿ ಹಾಗೂ ಕ್ಯಾಂಟೀನ್‌ಗಳೇ ಜೀವಂತ ಸಾಕ್ಷಿ. ಹಾಳಾಗಲು ಸುಲಭವಾಗಿ ಜನ ಸಿಗುತ್ತಾರೆಂದರೆ ಹಾಳು ಮಾಡುವವರಿಗೆ ಅದೇ ಕಾರ್ಯ. ಹಾಗಾಗಿ ಅರಳುವ ಮನಸ್ಸು ತನ್ನ ಜಾಗರೂಕತೆಯಲ್ಲಿ ತಾನಿರಲೇ ಬೇಕು. ಈ ಹಾಳಾಗುವುದಕ್ಕೂ ಇಲ್ಲಿ ಮೂಲ ಕಾರಣವಾಗಿರುವುದು ಮತ್ತದೇ ಹಣ! ಪಾಲಕರು ಶ್ರಮ ವಹಿಸಿ ದುಡಿದ ಹಣವನ್ನು ಎಲ್ಲೆ ಇಲ್ಲದೇ ಖರ್ಚು ಮಾಡುವುದು ತಪ್ಪು ಅನ್ನಿಸುವುದಿಲ್ಲವೇ?

ನನಗೆ ಒಮ್ಮೆ ಅನ್ನಿಸುತ್ತದೆ. ಇಂತಹ ತಪ್ಪುಗಳಲ್ಲಿ ಮೊಗ್ಗಿನ ಮನಸ್ಸು ಎಷ್ಟು ಕಾರಣವಾಗಿರುತ್ತದೋ ಆ ಮೊಗ್ಗಿನ ಮನಸ್ಸಿನ ಪಾಲಕರದೂ ಅಷ್ಟೇ ಪಾಲಿರುತ್ತದೆ ಎಂದು! ಮಕ್ಕಳಿಗೆ ಅವಶ್ಯಕವಲ್ಲದಿದ್ದರೂ ಪಾಕೆಟ್ ಮನಿಯ ನೆಪವಾಗಿ ಹಣ ನೀಡುವುದು, ಮಕ್ಕಳು ಬೇಕೆಂದಾಗಲೆಲ್ಲ ಹೆಚ್ಚು ಹಣ ನೀಡುವುದು ಅವರು ಹೊರಗೆ ಏನು ಮಾಡುತ್ತಾರೆ, ಎಂತಹವರ ಸ್ನೇಹ ಬೆಳೆಸಿದ್ದಾರೆ ಎಂಬುದರ ಬಗೆಗೆ ತಿಳಿದುಕೊಳ್ಳದೇ ತಮ್ಮ ಮಕ್ಕಳು ಮಾಡಿದ್ದೆಲ್ಲವೂ ಸರಿ ಎಂದು ನಂಬುವುದು,

*(ಪುಟ12ರಲ್ಲಿ ಮುಂದುವರಿಯುದು)*

*PAGE DONATED BY : **WELL WISHER OF HWT***

# ಸಂಕ್ಷಿಪ್ತ ಸುದ್ದಿಗಳು

## ಸ್ವರ್ಣವಲ್ಲಿ ಸೇವಾ ಸಮಿತಿ ಮುಂಬೈ ವತಿಯಿಂದ ಜರಗಿದ ಕಾರ್ಯಕ್ರಮಗಳು

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಮದ್ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳ ಆದೇಶದಂತೆ ಸ್ವರ್ಣವಲ್ಲಿ ಸೇವಾ ಸಮಿತಿ ಮುಂಬೈ ವತಿಯಿಂದ ಈ ಕೆಳಗಿನ ಕಾರ್ಯಕ್ರಮಗಳನ್ನು ನೆರವೇರಿಸಲಾಯಿತು.

ಕಳೆದ ಜುಲೈ 15, 2011ರಂದು ಈರ್ವರು ನೂತನ ವಟುಗಳಿಗೆ ಉಪಾಕರ್ಮ ವಿಧಿಯ ಜೊತೆ ಗುರು ಪೂರ್ಣಿಮಾ ಪ್ರಯುಕ್ತ ಮಹಿಳೆಯರಿಂದ ಲಲಿತಾ ಸಹಸ್ರನಾಮ ಕುಂಕುಮಾರ್ಚನೆಯನ್ನು ಕೂಡ ನೆರವೇರಿಸಲಾಯಿತು.

12.8.2011ರಂದು ಶ್ರೀ ಜಿ. ಪಿ. ಕಾಶಿ ದಂಪತಿಗಳ ಯಜಮಾನತ್ವದಲ್ಲಿ ಶ್ರೀ ವರಮಹಾಲಕ್ಷ್ಮಿ ವ್ರತ ಆಚರಿಸಲಾಗಿ 35ಕ್ಕೂ ಹೆಚ್ಚು ಮಹಿಳೆಯರು ಈ ಕಾರ್ಯಕ್ರಮದಲ್ಲಿ ಶ್ರದ್ಧಾ ಭಕ್ತಿಯಿಂದ ಪಾಲ್ಗೊಂಡು ಶ್ರೀ ದೇವಿಯ ಕೃಪೆಗೆ ಪಾತ್ರರಾದರು.

13.8.2011ರಂದು ಯಜುರುಪಾಕರ್ಮ ಆಯೋಜಿಸಲಾಗಿ ಕಾರಣಾಂತರದಿಂದ ಗೃಹಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳದಿರುವುದು ವಿಷಾದದ ಸಂಗತಿ. ಮುಂಬರುವ ದಿನಗಳಲ್ಲಿ ಮುಂಬಯಿ ಗೃಹಸ್ಥರು ಶ್ರೀಗಳ ಆದೇಶದಂತೆ ವೈದಿಕ ಹಾಗೂ ಧಾರ್ಮಿಕ ಪರಂಪರೆಯನ್ನು ಪಾಲಿಸಲು ಸಹಕರಿಸಬೇಕಾಗಿ ಕಳಕಳಿಯ ವಿನಂತಿ.

ಈ ಎಲ್ಲಾ ಕಾರ್ಯಕ್ರಮಗಳು ಪೇಜಾವರ ಮಠ, ಸಾಂತಾಕ್ರೂಜ್, ಮುಂಬೈ ಇವರ ಸಹಕಾರದಿಂದ ಮತ್ತು ಶ್ರೀ ಅನಂತ ಭಟ್ ಡೊಂಬಿವಲಿ ಇವರ ಪೌರೋಹಿತ್ಯದಲ್ಲಿ ಸಾಂಗವಾಗಿ ವಿಧಿವತ್ತಾಗಿ ನಡೆಸಲಾಯಿತು.

## ಮಮತಾ ತಿಲಕ್ ರಾವ್ ಅವರಿಗೆ ಡಾಕ್ಟರೇಟ್

ಮುಂಬಯಿಯ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಮಮತಾ ತಿಲಕ್ ರಾವ್‌ರವರು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ| ಜಿ. ಎನ್. ಉಪಾಧ್ಯ ಅವರ ಮಾರ್ಗದರ್ಶನದಲ್ಲಿ ಬರೆದು ಸಲ್ಲಿಸಿದ 'ಮುಂಬಯಿ ಕನ್ನಡ ಕಥಾ ಸಾಹಿತ್ಯ ಒಂದು ಅಧ್ಯಯನ'ಎನ್ನುವ ಮಹಾ ಪ್ರಬಂಧವನ್ನು ಮನ್ನಿಸಿ ಅವರಿಗೆ ಕನ್ನಡದಲ್ಲಿ ಮುಂಬಯಿ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಮುಂಬಯಿ ಕನ್ನಡ ಶಾಲೆಯಲ್ಲಿ ಓದಿ ತಮ್ಮನ್ನು ತಾವು ರೂಪಿಸಿಕೊಂಡ ಮಮತಾ ತಿಲಕ್ ರಾವ್‌ರವರು, ಬಿ.ಕಾಂ.ಪದವಿ ಪಡೆದು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಉದ್ಯೋಗಿಯಾದ ನಂತರ ಮುಂಬಯಿಯ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಪದವಿಯನ್ನು ಸರ್ವಪ್ರಥಮ ಹಾಗೂ ವರದರಾಜ್ಯ ಆದ್ಯ ಬಂಗಾರದ ಪದಕದೊಂದಿಗೆ ಗಳಿಸಿಕೊಂಡರು. ಎಂ. ಎ. ಯಲ್ಲಿ ಅತಿ ಹೆಚ್ಚು ಅಂಕ ಪಡೆದು ಛಾನ್ಸಲರ್ ಮೆಡಲ್ (ರಾಜ್ಯಪಾಲರ ಸುವರ್ಣ ಪದಕ) 2003ಕ್ಕೂ ಪಾತ್ರರಾಗಿರುವರು. ಅವರ ಪ್ರತಿಭೆಯ ದ್ಯೋತಕವಾಗಿದೆ. ಸೃಜನಾ ಲೇಖಕಿಯರ ಬಳಗದ ಕಾರ್ಯದರ್ಶಿಯಾಗಿಯೂ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಕೈಲಾಸ ಮಾನಸ ಸರೋವರ ಯಾತ್ರೆಗೊಂಡು ಯಶಸ್ವಿಯಾಗಿ ಪೂರೈಸಿಬಂದ ಅವರು ಆ ಯಾತ್ರೆಯ ಕುರಿತು ಅಪೂರ್ವ ಕೃತಿಯನ್ನು ರಚಿಸಿದ್ದಾರೆ. ಮಮತಾ ರಾವ್‌ರವರು ಉತ್ತಮ ವಿಮರ್ಶಕರಾಗಿಯೂ ಹೆಸರು ಗಳಿಸಿದ್ದಾರೆ. ಅವರಿಗೆ ಅಭಿನದನೆಗಳು.

## ಈಶ್ವರ ಅಲೆವೂರು ಅವರಿಗೆ ಡಾಕ್ಟರೇಟ್

ಈಶ್ವರ ಅಲೆವೂರು ಅವರು ಬರೆದು ಸಲ್ಲಿಸಿದ 'ಕನ್ನಡ ವಾಙ್ಮಯಕ್ಕೆ ವಿಶುಕುಮಾರರ ಕೊಡುಗೆ' ಎಂಬ ಮಹಾ ಪ್ರಬಂಧವನ್ನು ಮನ್ನಿಸಿ ಮುಂಬಯಿ ವಿಶ್ವವಿದ್ಯಾಲಯವು ಅವರಿಗೆ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ. ಅವರು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ| ಜಿ. ಎನ್. ಉಪಾಧ್ಯರ ಮಾರ್ಗದರ್ಶನದಲ್ಲಿ ಈ ಸಂಶೋಧನೆಯನ್ನು ನಡೆಸಿದ್ದರು. ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನಲ್ಲಿ ಉದ್ಯೋಗಿಯಾದ ಇವರು ಹವ್ಯಾಸಿ ಪತ್ರಕರ್ತರು. ಮುಂಬಯಿಯ ಅನೇಕ ಕನ್ನಡ ಸಾಹಿತ್ಯ ವಿಚಾರಗೋಷ್ಠಿಗಳಲ್ಲಿ ವಿದ್ವತ್‌ಪೂರ್ಣ ಲೇಖನಗಳನ್ನು ಮಂಡಿಸಿದ್ದಾರೆ. ಮುಂಬಯಿವಾಣಿ, ಸಂಜೆಸುದ್ದಿ, ಉದಯರಾಗ, ಉದಯದೀಪ, ಉದಯವಾಣಿ, ಮೊಗವೀರ ಪತ್ರಿಕೆಗಳಿಗೆ ಬರೆಯುತ್ತ ಬಂದಿರುವ ಇವರಿಗೆ 2006ರಲ್ಲಿ 'ಹೃದಯವಂತರು' ಎನ್ನುವ ಪ್ರಶಸ್ತಿಯೂ ಕೂಡ ಲಭಿಸಿದೆ. ಕರ್ನಾಟಕ ಸಂಘದ ಜತೆ ಕಾರ್ಯದರ್ಶಿಯೂ ಆದ ಇವರು ಕನ್ನಡ ನಾಡು ನುಡಿಗಳ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರಿಗೆ ಅಭಿನಂದನೆಗಳು.

## ಕರ್ನಾಟಕ ಸಮರಸ ಭವನದಲ್ಲಿ ಶ್ರೀನಿವಾಸ ಜೋಕಟ್ಟೆಯವರ ಎರಡು ಕೃತಿಗಳ ಬಿಡುಗಡೆ

ಜೂನ್ 23ರಂದು ಕರ್ನಾಟಕ ಸಂಘ ಮಾಟುಂಗಾದ ಸಮರಸ ಭವನದಲ್ಲಿ 'ಕರ್ನಾಟಕ ಮಲ್ಲ'ದ ಉಪಸಂಪಾದಕ 'ಸ್ನೇಹ ಸಂಬಂಧ'ದ ಸಂಪಾದಕ ಕಥೆಗಾರ ಶ್ರೀನಿವಾಸ ಜೋಕಟ್ಟೆಯವರ ಅವಳಿ ಕೃತಿಗಳಾದ 'ದೇವಕಿಯ ಪತ್ರಗಳು' ಕಥಾಸಂಕಲನ ಮತ್ತು 'ಮಾಯಾಲೋಕದ ಒಳಗುಟ್ಟುಗಳು' ಬಿಡುಗಡೆಯಾದವು. ಮುಖ್ಯ ಅತಿಥಿಗಳಾಗಿ ಪಾಲುಗೊಂಡು ಕೃತಿಯನ್ನು ಬಿಡುಗಡೆ ಮಾಡಿದ ಚಂದ್ರಶೇಖರ ಪಾಲೆತ್ತಾಡಿಯವರು ಮಾತನಾಡುತ್ತ ಲೇಖಕನಿಗೆ ಬೇಕಾದ ಅರ್ಹತೆಗಳನ್ನು ಮಾಯಾಲೋಕದ ಒಳಗುಟ್ಟುವಿನಲ್ಲಿ ಜೋಕಟ್ಟೆ ತಿಳಿಸಿದ್ದಾರೆ ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಕರ್ನಾಟಕ ಸಂಘ ಮುಂಬಯಿಯ ಅಧ್ಯಕ್ಷ ಸಾಹಿತಿ ಡಾ| ಜಿ. ಡಿ. ಜೋಶಿಯವರು 'ಬರವಣಿಗೆಯಲ್ಲಿ ನಾಜೂಕತಯನ್ನು ಮೈಗೂಡಿಸಿಕೊಂಡಿರುವ ಜೋಕಟ್ಟೆಯವರ ಕಥಾ ಸಂಕಲನವು ಬದುಕಿನ ಸನ್ನಿವೇಶಗಳಿಗೆ ಹತ್ತಿರವಾಗಿದ್ದು ಓದುಗರನ್ನು ಚಿಂತನೆಗೆ ಹಚ್ಚಿಸುತ್ತದೆ ಎಂದರು.

ಕಥಾ ಸಂಕಲನ 'ದೇವಕಿಯ ಪತ್ರಗಳು' ಬಗ್ಗೆ ಕೃತಿಸಮೀಕ್ಷೆಯನ್ನು ಅಕ್ಷಯ ಮಾಸಿಕದ ಸಹಾಯಕ ಸಂಪಾದಕ ಹರೀಶ್ ಹೆಜ್ಮಾಡಿಯವರು ಮಾಡಿದರು. ಲೇಖನ ಸಂಕಲನ 'ಮಾಯಾಲೋಕದ ಒಳಗುಟ್ಟುಗಳು' ಈ ಕೃತಿಯಬಗ್ಗೆ ಮೊಗವೀರ ಮಾಸಿಕದ ಸಂಪಾದಕ ಅಶೋಕ್ ಸುವರ್ಣರವರು ಮಾಡಿದರು. ಕಾರ್ಯಕ್ರಮವನ್ನು ನಿರೂಪಿಸಿದ ಕರ್ನಾಟಕ ಸಂಘ ಮುಂಬಯಿ ಗೌ. ಪ್ರ. ಕಾರ್ಯದರ್ಶಿ ಡಾ| ಭರತ್‌ಕುಮಾರ ಪೊಲಿಪು ಆಭಾರ ಮನ್ನಿಸಿದರು.

## ಅಖಿಲ ಭಾರತ ಕನ್ನಡ ಸಾಂಸ್ಕೃತಿಕ ಸಮ್ಮೇಳನ

ಮುಂಬಯಿ ಕನ್ನಡ ಸಂಘ (ರಿ) ಮುಂಬಯಿ ಹಾಗೂ ಹೃದಯವಾಹಿನಿ, ಜನಮನ ಸ್ಪಂದನ, ಕನ್ನಡ ಪತ್ರಿಕೆ ಮಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ, ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಹಕಾರದಲ್ಲಿ ಆಗಸ್ಟ 6 ಮತ್ತು 7, 2011ರಂದು 8ನೇ ಅಖಿಲ ಭಾರತ ಕನ್ನಡ ಸಂಸ್ಕೃತಿ ಸಮ್ಮೇಳನವು ಬಿಲ್ಲವರ ಭವನ, ಸಾಂತಾಕ್ರೂಸ್

*PAGE DONATED BY : **SHRI N. R. HEGDE, DOMBIVLI** (DEC.-2011)*

(ಪೂ), ದಲ್ಲಿ ಜರಗಿತು. ಸಾಂಸ್ಕೃತಿಕ ಸಮಾವೇಶದ ಅಂಗವಾಗಿ ಕವಿಗೋಷ್ಠಿ, ಹೊರನಾಡು ಕನ್ನಡಿಗರ ಗೋಷ್ಠಿ, ಹಾಸ್ಯ ಗೋಷ್ಠಿ, ಮಾಧ್ಯಮ ಗೋಷ್ಠಿ, ಹಾಗೂ ಗಾಯನ, ಭರತ ನಾಟ್ಯ, ಜಾನಪದ ನೃತ್ಯ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಸಮ್ಮೇಳನಾಧ್ಯಕ್ಷರಾದ ಖ್ಯಾತ ಸಾಹಿತಿ ನಾಗತಿಹಳ್ಳಿ ಚಂದ್ರಶೇಖರರವರು ''ಉಳಿದ ಎಲ್ಲ ಭಾಷೆಗಳು ಶೈಶವಾವಸ್ಥೆಯಲ್ಲಿರುವಾಗಲೇ ತನ್ನ ಹಿರಿಮೆಯನ್ನು ಮೆರೆದ ನಮ್ಮ ಮಾತ್ರಭಾಷೆ ಕನ್ನಡವನ್ನು ಉಳಿಸಿ ಬೆಳೆಸುವ ಹೊಣೆಗಾರಿಕೆ ಪ್ರತಿಯೊಬ್ಬ ಕನ್ನಡಿಗನದ್ದಾಗಿದೆ. ಈ ಕಾರ್ಯ ಹೊರನಾಡಿನಲ್ಲಷ್ಟೇ ಅಲ್ಲ, ವಿದೇಶದಲ್ಲೂ ನಡೆಯುತ್ತಿವೆ. ಕನ್ನಡಕ್ಕಾಗಿ ಮಿಡಿಯುವ ಮನಸ್ಸುಗಳು ಎಲ್ಲಡೆಯಲ್ಲಿಯೂ ಇವೆ. ಈ ಮಿಡಿಯುವ ಮನಸ್ಸುಗಳಿಂದಲೇ ಕನ್ನಡವು ಉಳಿದಿದೆ' ಎಂದು ನುಡಿದರು.

## ಡೊಂಬಿವಲಿಯಲ್ಲಿ ವರಮಹಾಲಕ್ಷ್ಮಿ ವೃತ ಆಚರಣೆ

ದಿನಾಂಕ 12.8.2011ರಂದು ಡೊಂಬಿವಲಿಯ ಹವ್ಯಕ ಮಹಿಳಾ ವಿಭಾಗದವರು ತಮ್ಮದೇ ಆದ ಹವ್ಯಕ ಮೆಡಿಕಲ್ ಸೆಂಟರ್‌ದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಒಕ್ಕಟ್ಟಾಗಿ ವರಮಹಾಲಕ್ಷ್ಮಿ ವೃತವನ್ನು ಶೃದ್ಧೆ ಹಾಗೂ ಭಕ್ತಿಯಿಂದ ಆಚರಿಸಿದರು. ಈ ಪೂಜೆಯನ್ನು ಚಂದ್ರಶೇಖರ ಭಟ್‌ರವರು ಚಂದವಾಗಿ, ಸಾಂಗವಾಗಿ ಸಾಗಿಸಿಕೊಟ್ಟರು. ಎಸ್. ಕೆ. ಬಗ್ಗೋಣ ಪೂಜೆಯನ್ನು ಕೈಕೊಂಡು ಬಂದ ಮಹಿಳೆಯರಿಗೆಲ್ಲರಿಗೂ ಉಪಹಾರವನ್ನು ವ್ಯವಸ್ಥೆಯನ್ನು ಮಾಡಿದರು.

## Achievement

Nikhil D. Hegde, s/o. Dr. (Smt.) Sujata and Dr. Dinesh Hegde secured 92.5% in HSC Examination held in February



2011. He also secured 182/200 in CET Examination.

He was awarded prize by Home Minister of Maharashtra State R. R. Patil. He has secured Admission in M.B.B.S. at Nair Hospital, Mumbai.

***We congratulate and wish him all success***

## Donation

Smt. & Shri N. K. Hegde, Dombivli donated Rs. 1100 to HWT on the birth of their grandson Master Aarush (Son of Smt. Sandya & Shri Aditya Bhat)

***

### ಶ್ರೀ ದುರ್ಗಾಪೂಜೆ

ನಮ್ಮ ಸಂಸ್ಥೆಯ ವಾರ್ಷಿಕ ದುರ್ಗಾಪೂಜೆಯನ್ನು ತಾ. 1.10.2011 ಶನಿವಾರದಂದು ಪೇಜಾವರ ಮಠ, ಸಾಂತಾಕ್ರೂಸ್‌ದಲ್ಲಿ ಹಮ್ಮಿಕೊಳ್ಳಲಾಗಿದೆ., ಈ ಕಾರ್ಯಕ್ರಮದಲ್ಲಿ ನಮ್ಮ ಸಂಸ್ಥೆಯ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ. ಅಂದುಶ್ರೀ ದೇವಿಯ ಪ್ರೀತ್ಯರ್ಥವಾಗಿ ಕುಂಕುಮಾರ್ಚನೆಯನ್ನು ಮಾಡಲಾಗುವುದು.


**SUVITEK INTERNATIONAL**

**Authorised Dealers for : ARMSTRONG, INTERARCH, CRIL**

- PRE-ENGINEERED BUILDINGS
- ROOFINGS
- WALL CLADDINGS
- THERMAL INSULATIONS
- FALSE CEILINGS
- FALSE FLOORINGS
- BLINDS
- SIGNAGES

◆

**5/98, Jayvijay Society, Sahar Road, Mumbai-400 099 India**
**Tel. : 2834 2952 ● Fax : 2824 8794**
**E-mail : suvitek@gmail.com**

*ADVT.*

UIL

**UGRU INDUSTRIES**

*With Best Compliments from*

**UGRU INDUSTRIES**
**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

*ADVT.*


*PAGE DONATED BY : **HEGDE HOSPITAL,** CHEMBUR, COURTESY : **DR. DINESH HEGDE** (DEC.-2009)*

'Havyaka Sandesha', September 2011

**RNI NO. MAHBIL / 2000 / 746,**
**Post al R.NO. L / TECH - 47 / 989 / MBI / 2009 - 11**

*Posted at Mumbai Patrika Channel Stg. Office Mumbai-400 001·*

Date of Posting :
27, 28th of every previous month

*If undelivered, please return to :*
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
**E-mail : havyakamumbai@hotmail.com**
**Visit : www.havyakamumbai.com**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

**REGISTERED NEWSPAPER**

**To,**

ಮಕ್ಕಳೆದುರಿಗೇ ಚಟ ಮಾಡುವುದು ಇವೆಲ್ಲವೂ ಮೊಗ್ಗಿನ ಮನಸ್ಸಿನ ಮೇಲೆ ಅತೀವ ಪರಿಣಾಮ ಬೀರುತ್ತದೆ. ತನ್ನ ಪಾಲಕರೇ ತನಗೆ ಪ್ರೋತ್ಸಾಹಿಸುತ್ತಾರೆ ಎಂಬ ಭಾವ ಅವರಲ್ಲಿ ಚಿಗುರೊಡೆಯ ತೊಡಗುತ್ತದೆ. ಆಗ ಬೇಡವೆಂದರೂ ಮನಸ್ಸು ತಪ್ಪು ಹಾದಿಯಲ್ಲೇ ಹೆಜ್ಜೆ ಇಡುತ್ತದೆ.

ದೇಶದಲ್ಲಿ ಅದೆಷ್ಟೋ ಮಕ್ಕಳು ದಿನದ ಊಟಕ್ಕೂ ಗತಿ ಇಲ್ಲದೇ ಸಾಯುತ್ತಿರುತ್ತಾರೆ. ಅದೆಷ್ಟೋ ಮೊಗ್ಗಿನ ಮನಸ್ಸು ವಾರಾನ್ನ ಮಾಡಿ ಕಲಿಯುತ್ತಿರುತ್ತವೆ. ಹುಟ್ಟಿನಂದಿನಿಂದ ಪಾಲಕರ ಮುಖವನ್ನೇ ನೋಡದ ಅದೆಷ್ಟೋ ಅನಾಥ ಮನಸ್ಸು ಪಾಲಕರ ಪ್ರೀತಿಗಾಗಿ ಹಂಬಲಿಸುತ್ತಿರುತ್ತದೆ. ಅದೆಷ್ಟೋ ಯುವ ಮನಸ್ಸು ಉದ್ಯೋಗ ಮಾಡಿಕೊಂಡು ರಾತ್ರಿ ಶಾಲೆಗೆ ಹೋಗುತ್ತವೆ. ಇಂತಹ ಮನಸ್ಸುಗಳ ನಡುವೆಯೇ ದುಡ್ಡು-ಸುಖ ಎಲ್ಲವೂ ಹೆಚ್ಚಾಗಿರುವ ಮನಸ್ಸು ಮರೆಯುತ್ತಿದೆ! ಎಷ್ಟೋ ಮಂದಿ ರೈತರ ಮಕ್ಕಳಿಗೆ ತಮ್ಮ ಮನೆಯ ತೋಟ-ಗದ್ದೆಗಳು ಎಲ್ಲಿವೆ, ಅಲ್ಲಿ ಯಾವ ಬೆಳೆ ಬೆಳೆಯಲಾಗುತ್ತದೆ ಎಂಬುದು ಗೊತ್ತಿಲ್ಲ. ಯಾವ ರೀತಿಯಲ್ಲಿ ಅಲ್ಲಿ ಕೆಲಸ ಮಾಡ ಲಾಗುತ್ತದೆ ಎಂದು ಗೊತ್ತಿಲ್ಲ. ಇನ್ನು ಕೆಲ ಮನಸ್ಸುಗಳಿಗೆ ಯಾವ ಉದ್ಯೋಗ ಮಾಡುತ್ತಿದ್ದಾರೆ ಎಂಬುದರ ಅರಿವೇ ಇರುವುದಿಲ್ಲ!

ಕೈಯಲ್ಲಿ ಹಣವಿದೆ ಎಂದು ಖರ್ಚು ಮಾಡುವ ಮನಸ್ಸು ತನ್ನ ಕರ್ತವ್ಯವೇನು? ತಾನು ಮಾಡುತ್ತಿರುವುದು ಸರಿಯಾ? ಖರ್ಚು ಮಾಡುವ ಮೋಜಿನ ಪಾರ್ಟಿ, ದುಬಾರಿ ಗಿಫ್ಟ್, ಶೋಕಿಯ ಬೈಕ್-ಮೊಬೈಲ್ ಇವೆಲ್ಲ ಓದುವ ಕಾಲಕ್ಕೆ ಅವಶ್ಯಕವಾ ಎಂಬ ಪ್ರಶ್ನೆಗಳಿಗೆಲ್ಲ ಉತ್ತರ ಕಂಡುಕೊಳ್ಳಲೇಬೇಕು. ಸ್ನೇಹಿತರ ಜೊತೆ ಓಡಾಡುವ ಮನಸ್ಸು ಅವರ ಜೊತೆ ಹೊಂದಿಕೊಳ್ಳುವುದು ಅನಿವಾರ್ಯ. ಹಾಗಾಗಿ ಸ್ನೇಹ ಎಂಬುದು ಸಮಾನರಲ್ಲಿದ್ದರೆ ಅಂತಹ ಅನಿವಾರ್ಯತೆ ಒದಗುವುದೇ ಇಲ್ಲ. ತನ್ನ ಪಾಲಕರಿಗೆ ತಾನು ಸುಳ್ಳು ಹೇಳಿದೆನೆಲ್ಲ ಎಂಬ ಪಾಪಪ್ರಜ್ಞೆಯಾಗಲೀ, ಹೂವಿನಂತಹ ವಿದ್ಯಾರ್ಥಿ ಜೀವನವನ್ನೇ ಸುಮ್ಮನೇ ಹಾಳು ಮಾಡಿಕೊಂಡೆನಲ್ಲಾ ಎಂಬ ಪಶ್ಚಾತ್ತಾಪವಾಗಲೀ ಮಾಡಿಕೊಳ್ಳುವ ಅವಶ್ಯಕತೆಯೇ ಇರುವುದಿಲ್ಲ. ತನ್ನ ಮಕ್ಕಳು ತನಗೆ ಮೋಸ ಮಾಡುವುದಿಲ್ಲ. ಸುಳ್ಳು ಹೇಳುವುದಿಲ್ಲ ಎಂಬ ಪಾಲಕರ ನಂಬಿಕೆಗೆ ಮೋಸ ಮಾಡಿ ಮೊಗ್ಗಿನ ಮನಸ್ಸು ಸಾಧಿಸುವುದಾದರೂ ಏನಿದೆ ಹೇಳಿ?

ವಿದ್ಯಾರ್ಥಿ ಜೀವನ ಎಂದರೆ ಅದೊಂದು ತಪಸ್ಸಿನ ಕಾಲ. ತನ್ನ ಓದಿನ ಬಗೆಗೆ, ತನ್ನ ಮುಂದಿನ ಜೀವನವನ್ನು ಹೂವಾಗಿಸುವ ಬಗೆಗೆ ಯೋಚಿಸುವ ಕಾಲ. ಅಂತಹ ಕಾಲದಲ್ಲಿ ಸಿನಿಮಾ, ಪಾರ್ಟಿ, ಮೋಜು ಎಂದು ಸುಮ್ಮನೇ ಕಾಲವ್ಯಯ ಮಾಡಿದರೆ ಹೋದ ಕಾಲ ಮತ್ತೆ ಬರಲು ಸಾಧ್ಯವೇ ಹೇಳಿ? ಹಾಗೆಯೇ ಕಳೆದುಕೊಂಡ ನಂಬಿಕೆಯೂ ಸಹ! ಜೀವನಕ್ಕೆ ಮೋಜು ಬೇಕು. ಆದರೆ ಅದು ಅತಿಯಾಗಬಾರದು ಅಷ್ಟೇ. ಗಳಿಸಲಾಗುವುದಿಲ್ಲ ಎಂದ ಮೇಲೆ ಕಳೆಯುವ ಅರ್ಹತೆಯೂ ಬರುವುದಿಲ್ಲ. ನಮ್ಮ ಮೋಜು ನಮ್ಮ ಪಾಲಕರಿಗೇ ನೋವನ್ನುಂಟು ಮಾಡುವುದು ಎಷ್ಟು ಸರಿ? ಸ್ವಲ್ಪ ಮೋಜಿನಿಂದ ಹೊರಬಂದು ಯೋಚಿಸಿ.

***ಸೌಜನ್ಯ : ಧ್ಯೇಯನಿಷ್ಠ ಪತ್ರಕರ್ತ***

---

# ಶಿಕ್ಷಕ

**ಓ ನಮ್ಮ ನಲ್ಮೆಯ ಒಲುಮೆಯ ಶಿಕ್ಷಕ**
**ನೀನೇ ಸಮಾಜದ ಸುಧಾರಕ ರಕ್ಷಕ**
**ತಾಯಿಯೇ ನಮಗೆಲ್ಲಾ ಮೊದಲ ಗುರು**
**ತಾಯಿಂದಲೇ ಜ್ಞಾನದ ಪರಿಜ್ಞಾನ ಶುರು**
**ಆದರೆ ಜ್ಞಾನದ ಪರಿಪಕ್ವ ಮಾಡಿದವರು ಗುರು।**
**ಗಾದೆ, ಕೆಟ್ಟು ಗುರುವ ಸೇರು**
**ಶಿಕ್ಷಣವೇ ಈ ಬಾಳಿನ ಕಲ್ಪಿತರು**
**ಶಿಕ್ಷಕನೋರ್ವ ಮಹಾ ಶಿಲ್ಪಕಾರ**
**ಮಾಡುವ ಶಿಷ್ಯರ ಬಾಳು ಬಂಗಾರ**
**ಕಲ್ಲಿಂದ ಕಡೆದ ಸುಂದರ ಮೂರ್ತಿ**
**ತುಂಬಿ ಜೀವ ಜ್ಞಾನ ನವಚೈತನ್ಯ ಸ್ಫೂರ್ತಿ**
**ಬರಡು ಭೂಮಿ ಮಾಡುವ ಹಸಿರು**
**ಸುಜ್ಞಾನವೇ ನಮ್ಮ ಬದುಕಿನ ಬಂಢಾರ**
**ಒಳ್ಳೆ ಭವಿತವ್ಯಕ್ಕೆ ಇದು ಆಧಾರ**
**ಸದುಪಯೋಗದಿಂದ ವೃದ್ಧಿಸುವುದು ಜ್ಞಾನ**
**ಈ ಜಗದಲ್ಲಿ ನಮ್ಮ ಸ್ಥಾನ ಹಾಗೂ ಮಾನ**
**ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದ**
**ದ್ರೋಣಾಚಾರ್ಯ ಮತ್ತು ಅರ್ಜುನನ ಅದೆಂಥಾ ಪವಿತ್ರ ಸಂಬಂಧ**
**ಗುರುಶಿಷ್ಯರ ಪ್ರೀತಿ ವಿಶ್ವಾಸ ಗೌರವ ಭಕ್ತಿ**
**ವೃದ್ಧಿಸುವುದು ಪರಸ್ಪರರ ಘನತೆ ಆತ್ಮಶಕ್ತಿ**
**ಇದೇ ಭಾರತದ ವೈಶಿಷ್ಟ್ಯ ಹಾಗೂ ಉಚ್ಚ ಸಂಸ್ಕೃತಿ**
**ಗುರುನಿಂದೆ, ಅವಹೇಳನದಿಂದಾಗುವದು ಶಿಷ್ಯರ ಅಧೋಗತಿ**
**ಎಂದೇ ಉಲ್ಲೇಖಿಸಿರುವರು ತಿಳಿದವರು**
**ಗುರುರ್ ಬ್ರಹ್ಮ, ಗುರುರ್ ವಿಷ್ಣು, ಗುರುರ್ ದೇವೋ ಮಹೇಶ್ವರ**
**ಗುರುಸಾಕ್ಷಾತ್ ಪರಬ್ರಹ್ಮ ಸತ್ಮೈಶ್ರೀ ಗುರುವೇನ್ನಮಃ**

**– ಶಾಂತಾರಾಮ ಕುರ್ಸೆ, ಪುಣೆ**

*PAGE DONATED BY : **SHRI VIVEK BHAGWAT,** MULUND (DEC.-2010)*